ಬೆಲೆ ರೂ.2.50
D.O.P - 15th of every month at Udupi Head Office

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

# ಶ್ರೀ ಶಾರದಾ

ಮಾಸಪತ್ರಿಕೆ – 15 ಆಗಸ್ಟ್ 2022

॥ ಧಿಯೋ ಯೋನಃ ಪ್ರಚೋದಯಾತ್ ॥

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 0820-2958444, 8971185844
ಸಂಪುಟ-22 ಸಂಚಿಕೆ-8 ಪುಟಗಳು-8 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

## ಶ್ರೀ ಶಾರದಾ ದೇವಸ್ಥಾನದಲ್ಲಿ ನಾಗರಪಂಚಮಿ ಆಚರಣೆ




ದಿನಾಂಕ 02.08.2022 ರಂದು ಶ್ರೀ ಶಾರದಾ ಮಂಟಪದ ವಠಾರದಲ್ಲಿರುವ ಶ್ರೀ ನಾಗದೇವರ ಗುಡಿಯಲ್ಲಿ ಪ್ರಾರ್ಥನೆಯೊಂದಿಗೆ ನಾಗರಪಂಚಮಿ ಕಾರ್ಯಕ್ರಮ ಪ್ರಾರಂಭವಾಯಿತು. ದೇವಸ್ಥಾನದ ಅರ್ಚಕರಾದ ಶ್ರೀ ನಾಗೇಂದ್ರ ಭಟ್ ಇವರು ನೈರ್ಮಲ್ಯ ಪೂಜೆ, ಪಂಚಾಮೃತ ಅಭಿಷೇಕ, ಸೀಯಾಳ ಅಭಿಷೇಕ, ಅಲಂಕಾರ, ಹರಿದ್ರ ಅಷ್ಟೋತ್ತರ ಅರ್ಚನೆ, ಮತ್ತು ಮಹಾ ಮಂಗಳಾರತಿಯನ್ನು ನೆರವೇರಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್, ಕಾರ್ಯದರ್ಶಿ ಶ್ರೀ ಪ್ರಭಾಕರ ಭಂಡಿ, ಜೊತೆ ಕಾರ್ಯದರ್ಶಿ ಶ್ರೀ ವಿನೋದ್ ಕುಮಾರ್, ನಿರ್ದೇಶಕರು ಹಾಗೂ ಸಮಾಜಬಾಂಧವರು ಉಪಸ್ಥಿತರಿದ್ದರು. ಅರ್ಚಕರಾದ ಶ್ರೀ ಧರಣೇಶ್ ಭಟ್, ಮ್ಯಾನೇಜರ್ ಮತ್ತು ಸಹಾಯಕ ಮ್ಯಾನೇಜರ್‌ರವರು ಸಹಕರಿಸಿದರು.

## ಶ್ರೀ ಶಾರದಾ ದೇವಸ್ಥಾನದಲ್ಲಿ ವರಮಹಾಲಕ್ಷ್ಮೀ ವ್ರತ ಆಚರಣೆ




ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಕುಂಜಿಬೆಟ್ಟು ಉಡುಪಿಯ ವತಿಯಿಂದ ಶ್ರಾವಣ ಶುಕ್ರವಾರದ ಪ್ರಯುಕ್ತ ವರ್ಷಂಪ್ರತಿಯಂತೆ ಮಹಿಳಾ ವೇದಿಕೆ ಮತ್ತು ಸಂಘದ ವತಿಯಿಂದ ವರಮಹಾಲಕ್ಷ್ಮೀ ವ್ರತ ತಾ.05.08.2022ರಂದು ನಡೆಯಿತು. ಕರ್ತೃಗಳಾಗಿ ಶ್ರೀ ಹರಿಕೃಷ್ಣ ರಾವ್ ಮತ್ತು ನಿರ್ಮಲಾ ಹರಿಕೃಷ್ಣ ರಾವ್ ದಂಪತಿಗಳು ಭಾಗವಹಿಸಿದ್ದರು. ಪುರೋಹಿತರಾದ ಶ್ರೀ ಪ್ರತಾಪ್ ಭಟ್ ಮತ್ತು ಪಾವಂಜೆ ಸುಬ್ರಹ್ಮಣ್ಯ ಭಟ್ ಪೂಜಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ದೇವಿಯನ್ನು ಪಟ್ಟೆಪೀತಾಂಬರ, ಪುಷ್ಪಗಳಿಂದ ಅಲಂಕರಿಸಲಾಗಿತ್ತು. ವಾಡಿಕೆಯಂತೆ ಭಜನೆ, ಲಲಿತಾಸಹಸ್ರನಾಮ, ಶ್ರೀ ಶಂಕರಸಹಸ್ರ ನಾಮಾರ್ಚನೆಗಳನ್ನು ಪಠಿಸಿ ಮಹಾಪೂಜೆ ನೆರವೇರಿಸಲಾಯಿತು. ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಮಹಿಳಾವೇದಿಕೆಯ ಕಾರ್ಯಕರ್ತರು ಹಾಗೂ ಭಕ್ತಾದಿಗಳು ಉಪಸ್ಥಿತರಿದ್ದರು. ವರಮಹಾಲಕ್ಷ್ಮೀ ಪೂಜೆಯ ನಂತರ ಭಕ್ತಾದಿಗಳಿಗೆ ಫಲಾಹಾರವನ್ನು ವ್ಯವಸ್ಥೆ ಮಾಡಲಾಗಿತ್ತು.

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ–576102.
ಫೋನ್ : 0820–2958444, 8971185844

ಆತ್ಮೀಯ ಸಮಾಜ ಬಾಂಧವರೇ,

ಸಂಘದ ವತಿಯಿಂದ ಅನೇಕ ಕಾರ್ಯಕ್ರಮಗಳು ಜರಗಲಿದ್ದು, ಅವುಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಸಮಾಜ ಬಾಂಧವರೆಲ್ಲರೂ ಭಾಗವಹಿಸಿ, ಯಶಸ್ವಿಗೊಳಿಸಬೇಕಾಗಿ ಅಪೇಕ್ಷಿಸುತ್ತೇವೆ.

### ಹೂವಿನ ಪೂಜೆ

(ಮಹಿಳಾ ವೇದಿಕೆಯ ವತಿಯಿಂದ)
ತಾ.02-09-2022ನೇ ಶುಕ್ರವಾರ ಸಮಯ : ಸಂಜೆ 5-00 ಗಂಟೆಗೆ

### ಋಗುಪಾಕರ್ಮ

ತಾ.08-09-2022ನೇ ಗುರುವಾರ
ಸಮಯ : ಬೆಳಿಗ್ಗೆ 10-00ರಿಂದ ಅಪರಾಹ್ನ 12-15ರ ತನಕ
(ಕಾರ್ಯಕ್ರಮದ ನಂತರ ಪ್ರಸಾದ ಭೋಜನ ಇದೆ.)

### ಶೃಂಗೇರಿಯಲ್ಲಿ ಗುರುಗಳ ಭೇಟಿ

ತಾ.28-08-2022ನೇ ರವಿವಾರ

ಚಾತುರ್ಮಾಸ ನಿರತರಾಗಿರುವ ಗುರುಗಳ ಭೇಟಿಗೆ ತೆರಳಲು ಬೆಳಿಗ್ಗೆ 7-30 ಗಂಟೆಗೆ ಶ್ರೀ ಶಾರದಾ ಮಂಟಪದಿಂದ ವಾಹನದ ವ್ಯವಸ್ಥೆ ಮಾಡಲಾಗುತ್ತದೆ. ಅಂದಾಜು ವೆಚ್ಚ ಒಬ್ಬರಿಗೆ ರೂ.400. ಆಸಕ್ತ ಸಮಾಜ ಬಾಂಧವರು ಮುಂಚಿತವಾಗಿ ಕಾರ್ಯದರ್ಶಿ ಶ್ರೀ ಪಿ.ಪ್ರಭಾಕರ ಭಂಡಿ (9449254846) ಅಥವಾ ಜೊತೆ ಕಾರ್ಯದರ್ಶಿ ಶ್ರೀ ವಿನೋದ್ ಕುಮಾರ್ (9964896319) ಇವರನ್ನು ಸಂಪರ್ಕಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

| ಪಿ. ಪ್ರಭಾಕರ ಭಂಡಿ | ಕೆ. ಗಣೇಶ್ ಹೆಬ್ಬಾರ್ | ಕೆ. ಮಂಜುನಾಥ ಹೆಬ್ಬಾರ್ |
|---|---|---|
| ಕಾರ್ಯದರ್ಶಿ | ಕೋಶಾಧಿಕಾರಿ | ಅಧ್ಯಕ್ಷರು |

ಮತ್ತು ಆಡಳಿತ ಮಂಡಳಿಯ ಸರ್ವಸದಸ್ಯರು



## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು,
ಉಡುಪಿ - 576 102.

### ಆಮಂತ್ರಣ

ಮಾನ್ಯ ಸಮಾಜಬಾಂಧವರೇ,

ಸ್ವಸ್ತಿ! ಶ್ರೀ ಶುಭಕೃತ್ ನಾಮ ಸಂವತ್ಸರದ ಕನ್ಯಾ ಮಾಸ ದಿನ ೧೯ ಸಲುವ
ಆಶ್ವಯುಜ ಶುದ೧೦ ಯು, ತಾ.05-10-2022ನೇ ಬುಧವಾರ

ವಿಜಯದಶಮಿ ದಿನದಂದು

### ಶ್ರೀ ಚಂಡಿಕಾಯಾಗ ಮತ್ತು ಶ್ರೀ ಶಾರದಾ ಪೂಜಾ

ಕಾರ್ಯಕ್ರಮವು ಶ್ರೀ ಶಾರದಾ ಮಂಟಪದಲ್ಲಿ ಜರಗಲಿದೆ. ಸರ್ವರೂ ಬಂಧು-ಬಾಂಧವರೊಡಗೂಡಿ ಆಗಮಿಸಿ, ಆ ದಿನ ನಡೆಯಲಿರುವ ಎಲ್ಲಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಸಂಪನ್ನಗೊಳಿಸಬೇಕೆಂದು ಅಪೇಕ್ಷಿಸುತ್ತೇವೆ.

| ಪಿ. ಪ್ರಭಾಕರ ಭಂಡಿ | ಕೆ. ಗಣೇಶ ಹೆಬ್ಬಾರ್ | ಕೆ.ಮಂಜುನಾಥ ಹೆಬ್ಬಾರ್ |
|---|---|---|
| ಕಾರ್ಯದರ್ಶಿ | ಕೋಶಾಧಿಕಾರಿ | ಅಧ್ಯಕ್ಷರು |

ವಿ.ಸೂ : ಈ ವರ್ಷವೂ ನವರಾತ್ರಿಯಲ್ಲಿ ತಾ.26.09.2022ರಿಂದ ತಾ.04.10.2022ರ ವರೆಗೆ ಪ್ರತೀ ದಿನ ಸಂಜೆ ಶ್ರೀ ಶಾರದಾ ದೇವಸ್ಥಾನದಲ್ಲಿ ದುರ್ಗಾನಮಸ್ಕಾರ ಪೂಜೆಯನ್ನು ಏರ್ಪಡಿಸಲಾಗುವುದು. ದುರ್ಗಾನಮಸ್ಕಾರ ಸೇವೆಯ ಕರ್ತೃಗಳಾಗಬಯಸುವವರಿಗೆ ರೂ.5000 ಸೇವಾದರ ನಿಗದಿಪಡಿಸಲಾಗಿದೆ. ಆಸಕ್ತ ಭಕ್ತರು ವಿವರಗಳಿಗಾಗಿ ಕಾರ್ಯದರ್ಶಿ ಶ್ರೀ ಪ್ರಭಾಕರ ಭಂಡಿ, ಪೆರ್ಡೂರು 9449254846ರನ್ನು ಸಂಪರ್ಕಿಸಬೇಕಾಗಿ ಕೋರುತ್ತೇವೆ.

# ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಬಂಟ್ವಾಳ ವಲಯ-ವಿಟ್ಲ : ಕೆಸರುಗದ್ದೆ ಸಂಭ್ರಮ ಹಾಗೂ ವಾರ್ಷಿಕೋತ್ಸವ



ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ) ಬಂಟ್ವಾಳ ವಲಯ-ವಿಟ್ಲ ವತಿಯಿಂದ ದ್ವಿತೀಯ ಬಾರಿಗೆ ಕೆಸರುಗದ್ದೆ ಸಂಭ್ರಮ ಹಾಗೂ ವಾರ್ಷಿಕೋತ್ಸವವನ್ನು ತಾ.31.07.2022ರಂದು ಸುಬ್ಬರಾಯರ ಪೊಳಲಿಯಲ್ಲಿರುವ ಜೋಡು ಗದ್ದೆಯಲ್ಲಿ ಆಚರಿಸಲಾಯಿತು. ಕಾರ್ಯಕ್ರಮವನ್ನು ಶ್ರೀಮತಿ ಪ್ರಸುಮಾ ಸುಬ್ಬರಾವ್‌ರವರು ದೀಪ ಪ್ರಜ್ವಲನೆಗೊಳಿಸಿ ಕ್ರೀಡೆಗಳಿಗೆ ಚಾಲನೆ ನೀಡಿದರು. ಪ್ರತಿಷ್ಠಾನದ ಅಧ್ಯಕ್ಷರಾದ ಭವಾನಿ ಶಂಕರರಾಯರು ಸ್ವಾಗತಿಸಿದರು. ಪ್ರತಿಷ್ಠಾನದ ಸಂಚಾಲಕರೂ ಹಾಗೂ ನಿವೃತ್ತ ತಹಶೀಲ್ದಾರರೂ ಆದ ಮೋಹನ ರಾಯರು ಭೂಮಿ ತಾಯಿಗೆ ಹಾಲನ್ನು ಸಮರ್ಪಿಸಿ ಕೆಸರುಗದ್ದೆ ಕ್ರೀಡೋತ್ಸವವನ್ನು ಉದ್ಘಾಟಿಸಿದರು. ಪ್ರಾರ್ಥನೆಯನ್ನು ಕುಮಾರಿ ಅಭಿಷ್ಠಾ ಹಾಗೂ ಅಂಕಿತಾ ನೆರವೇರಿಸಿದರು. ಕೆಸರುಗದ್ದೆಯಲ್ಲಿ ಸ್ವಾಗತ ನೃತ್ಯವನ್ನು ಶ್ರೀಮತಿ ಅರುಣಾ ಶಿವರಾಮ ರಾವ್ ನೇತೃತ್ವದಲ್ಲಿ ಮಕ್ಕಳು ಮತ್ತು ಮಹಿಳೆಯರು ಸೊಗಸಾಗಿ ಮೂಡಿಸಿದರು.

ಕ್ರೀಡೋತ್ಸವದ ಸಂಪೂರ್ಣ ಉಸ್ತುವಾರಿಯನ್ನು ಶ್ರೀಮತಿ ಬೃಂದಾ ಗಣೇಶರಾವ್, ನಾಗರಾಜರಾವ್ ವಿಟ್ಲ, ಶ್ರೀಮತಿ ರಾಜೇಶ್ವರಿ ಮುರಳೀಧರ ರಾವ್, ಮಹೇಶ್ ನಿಟಿಲಾಪುರರವರು ನಿರ್ವಹಿಸಿದರು. ಆಟಿಯ ಕೂಟದ ವಿಶೇಷ ಭೋಜನವನ್ನು ತಯಾರಿಸಲು ಕಾರ್ಯದರ್ಶಿಗಳಾದ ಶ್ರೀಧರರಾವ್ ನೆಟ್ಲ, ನಂದಾ ಪೊಳಲಿ, ದಿನೇಶ ನಟ್ಟೋಜೆ ಪೊಳಲಿ, ಸದಾಶಿವ ಪೊಳಲಿ, ಶ್ರೀನಿವಾಸ ಪೊಳಲಿಯವರು, ಮಹಿಳಾ ಮಣಿಗಳು ಮುತುವರ್ಜಿ ವಹಿಸಿ ಸಿದ್ಧಪಡಿಸಿದ್ದರು.

ವಾರ್ಷಿಕೋತ್ಸವದ ಸಭಾ ಕಾರ್ಯಕ್ರಮವು ಅಪರಾಹ್ನ 3.00ಕ್ಕೆ ಸುಬ್ಬರಾಯರ ಮನೆಯಂಗಳದ ವೇದಿಕೆಯಲ್ಲಿ ಸಭಾದ ಅಧ್ಯಕ್ಷರಾದ ಅನಾರು ಕೃಷ್ಣ ಶರ್ಮರ ಅಧ್ಯಕ್ಷತೆಯಲ್ಲಿ ನಡೆಯಿತು. ಅತಿಥಿಗಳಾಗಿ ಚಂದ್ರಶೇಖರ ರಾವ್ ಬೊಕ್ಕಸ ಮೂಡಬಿದ್ರೆ, ಡಾ। ವೈ.ಸುದರ್ಶನರಾವ್ ಉಡುಪಿ, ಶ್ರೀಯುತ ಚಂದ್ರಕುಮಾರ್ ರಾವ್ ಬಾರ್ಕೂರು ಭಾಗವಹಿಸಿದ್ದರು. ಸಭಾ ಮತ್ತು ಪ್ರತಿಷ್ಠಾನದ ಪದಾಧಿಕಾರಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶ್ರೀಮತಿ ಅರುಣಾ ಶಿವರಾಮ ಸ್ವಾಗತಿಸಿದರು. ಕುಮಾರಿ ಅಭಿಷ್ಠಾ, ಕುಮಾರಿ ಅಂಕಿತಾ ಪ್ರಾರ್ಥನೆಗೈದರು.

ಜಿಲ್ಲಾ ಮಟ್ಟದ ಪ್ರಶಸ್ತಿ ವಿಜೇತ ಶಿಕ್ಷಕಿ ಶ್ರೀಮತಿ ಚೇತನಾ ರಮೇಶರಾವ್, ರಾಜ್ಯ ಪ್ರಶಸ್ತಿ ವಿಜೇತ ಅಂಗನವಾಡಿ ಕಾರ್ಯಕರ್ತೆ ಶ್ರೀಮತಿ ಅರುಣಾ ಶಿವರಾಮರಾವ್ ಹಾಗೂ ರಾಜ್ಯ ಮಟ್ಟದ ಮುಖ್ಯಮಂತ್ರಿ ಬೆಳ್ಳಿಪದಕ ಪಡೆದ ಕ.ರಾ.ರ.ಸಾ.ನಿಗಮದ ಚಾಲಕರಾದ ಶ್ರೀಯುತ ಜಯಪ್ರಕಾಶ್ ಬಿ. ಕಾವಳಕಟ್ಟೆ ಇವರನ್ನು ಸನ್ಮಾನಿಸಲಾಯಿತು. ಸನ್ಮಾನ ಪತ್ರವನ್ನು ಸಂತೋಷ ರಾವ್, ನಿತಿನ್ ಕುಮಾರ್ ಮತ್ತು ಶ್ರೀಮತಿ ರಾಜೇಶ್ವರಿ ವಾಚಿಸಿದರು. ಭವಾನಿ ಶಂಕರರಾಯರು ಪ್ರಾಸ್ತಾವಿಕ ಭಾಷಣವನ್ನು ನೆರವೇರಿಸಿದರು. ಕೆಸರುಗದ್ದೆ ಸ್ಪರ್ಧಾ ವಿಜೇತರಿಗೆ ಬಹುಮಾನ ನೀಡಲಾಯಿತು.

ಚಂದ್ರಶೇಖರ ರಾಯರು ಕೆಸರಿನ ಔಷಧಿಯ ಗುಣಗಳನ್ನು ಸಭೆಗೆ ಸಂದರ್ಭೋಚಿತವಾಗಿ ವಿವರಿಸಿದರು. ಡಾ। ಸುದರ್ಶನ ರಾಯರು ಮಾತನಾಡುತ್ತ ಹಳ್ಳಿಯ ಪರಿಸರದಲ್ಲಿ ಚೊಕ್ಕದಾಗಿ ಅಚ್ಚುಕಟ್ಟಾಗಿ ಕಾರ್ಯಕ್ರಮ ನಿರ್ವಹಿಸಿದ ಬಗ್ಗೆ ಅತೀವ ಪ್ರಶಂಸೆ ವ್ಯಕ್ತಪಡಿಸಿದರು. ಚಂದ್ರ ಕುಮಾರ್ ಬಾರ್ಕೂರ್‌ರವರು ಶಿಕ್ಷಣದ ಮಹತ್ವ ಹಾಗೂ ಸ್ವಯಂ ಸೇವಾ ಸಹಕಾರದ ಬಗ್ಗೆ ಸಭೆಗೆ ತಿಳಿಸಿದರು. ಶ್ರೀಮತಿ ಪೂರ್ಣಿಮಾರವರು ಕಾರ್ಯಕ್ರಮದ ಬಗ್ಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಕೃಷ್ಣಶರ್ಮ ಅನಾರುರವರು ಅಧ್ಯಕ್ಷ ಭಾಷಣದಲ್ಲಿ ಎಲ್ಲರ ಸಹಕಾರವನ್ನು ಶ್ಲಾಘಿಸಿದರು.

ಹರೀಶ್ ರಾವ್ ಕಾರ್ಯಕ್ರಮ ನಿರ್ವಹಿಸಿದರು. ಸ್ಮರಣಿಕೆಗಳನ್ನು ನೀಡಿದ ಶ್ರೀಮತಿ ಶಾರದಾ ಸುಕುಮಾರ ರಾವ್, ಶ್ರೀಮತಿ ಲಕ್ಷ್ಮಿಯಮ್ಮ ಮತ್ತು ನಾಗೇಶ್ ರಾವ್ ಮೊಡಂಕಾಪುರವರನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದ ಆಯೋಜಿಸಿದ ಸುಬ್ಬರಾವ್ ಹಾಗೂ ಶ್ರೀಮತಿ ಪ್ರಸುಮಾರವರನ್ನು ಸನ್ಮಾನಿಸಲಾಯಿತು. ಶ್ರೀಮತಿ ಶಾರದಾಗಣೇಶ ರಾವ್‌ರವರು ಧನ್ಯವಾದ ಸಮರ್ಪಿಸಿದರು. ಸಭಾದ ಉಪಾಧ್ಯಕ್ಷರಾದ ದೇವರಾವ್ ನಂದಾವರ ಹಾಗೂ ಶ್ರಮಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಲಾಯಿತು.

**ಸಂಪಾದಕ ಮಂಡಳಿ**

ಶ್ರೀ ಯು. ಅರವಿಂದ ಕುಮಾರ್
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಮಧುಸೂಧನ ರಾವ್ ಕುಂಜಾರುಗಿರಿ
ಡಾ। ಶ್ರೀಮತಿ ವಿಜಯ ರಾವ್ ವೈ.ಬಿ.
★★★★ ★★★★

ಸಲಹೆಗಾರರು :
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ
ಶ್ರೀ ಕೆ. ವೇಣುಗೋಪಾಲರಾವ್, ಅಂಬಲಪಾಡಿ

# ಬೆಳ್ತಂಗಡಿ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾದ ವಾರ್ಷಿಕೋತ್ಸವ



ದಿನಾಂಕ 17.07.2022ನೇ ಭಾನುವಾರದಂದು ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾದ 25ನೇ ವರ್ಷದ ವಾರ್ಷಿಕೋತ್ಸವವು ಶ್ರೀ ಸುಬ್ರಹ್ಮಣ್ಯ ಸಭಾಭವನ, ಲಾಯಿಲದಲ್ಲಿ ನಡೆಯಿತು. ವಿವಿಧ ರೀತಿಯ ಒಳಾಂಗಣ ಕ್ರೀಡೆಗಳು ರಜತಮಹೋತ್ಸವದ ಕ್ರೀಡಾ ಸಂಚಾಲಕರಾದ ಶ್ರೀ ದಿನೇಶ್ ಕುಮಾರ್‌ರವರ ಮುಂದಾಳುತ್ವದಲ್ಲಿ ನಡೆದವು. ಕ್ರೀಡಾಕೂಟವನ್ನು ಸಭಾದ ಉಪಾಧ್ಯಕ್ಷರಾದ ಶ್ರೀ ವಸಂತ್ ಭಟ್ ದಂಪತಿಗಳು ಉದ್ಘಾಟಿಸಿದರು. ವಾರ್ಷಿಕೋತ್ಸವ ಹಾಗೂ ಮಹಾಸಭೆಯು ಸಭಾದ ಅಧ್ಯಕ್ಷರಾದ ಶ್ರೀ ಪಿ. ರಾಧಾಕೃಷ್ಣ ರಾವ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಮುಖ್ಯ ಅತಿಥಿಗಳಾಗಿ ಕಾರ್ಕಳ ಶ್ರೀ ಶಂಕರ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಕೇಶವ ರಾವ್ ಭಾಗವಹಿಸಿದ್ದರು. 2021-22ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿ.ಯು.ಸಿ.ಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ತಾಲೂಕಿನ 24 ವಿದ್ಯಾರ್ಥಿಗಳಿಗೆ ರೂ.2,50,000 ವಿದ್ಯಾರ್ಥಿ ಪ್ರೋತ್ಸಾಹ ನಿಧಿಯನ್ನು ವಿತರಿಸಲಾಯಿತು. ಮುಖ್ಯ ಅತಿಥಿಗಳು ಮಾತನಾಡಿ, ಬೆಳ್ತಂಗಡಿ ಸಂಘದ ಸಾಧನೆಗಳನ್ನು ಶ್ಲಾಘಿಸಿದರು. ಅಧ್ಯಕ್ಷರು ಮಾತನಾಡಿ ರಜತ ಮಹೋತ್ಸವದ ಈ ವರ್ಷದಲ್ಲಿ ತಿಂಗಳಿಗೊಂದು ಕಾರ್ಯಕ್ರಮವನ್ನು ಆಯೋಜಿಸುತ್ತಿದ್ದು ವಿವಿಧ ತಿಂಗಳುಗಳಲ್ಲಿ ಕೈಗೊಂಡ ಕಾರ್ಯಕ್ರಮಗಳ ಮಾಹಿತಿಯನ್ನು ನೀಡಿ ಕೃತಜ್ಞತೆ ಸಲ್ಲಿಸಿದರು. ವೇದಿಕೆಯಲ್ಲಿ ಕಾರ್ಯದರ್ಶಿ ಶ್ರೀಮತಿ ರೇಖಾ, ಮಹಿಳಾ ಅಧ್ಯಕ್ಷೆ ಶ್ರೀಮತಿ ಹೇಮಲತಾ, ಯುವ ವೇದಿಕೆ ಅಧ್ಯಕ್ಷರಾದ ಶ್ರೀ ಪವನ್ ಕುಮಾರ್, ಮಹಿಳಾ ವೇದಿಕೆಯ ಗೌರವಾಧ್ಯಕ್ಷೆ ಶ್ರೀಮತಿ ಶಾಂತಾ ಸುರೇಶ್, ಆರ್ಥಿಕ ಸಮಿತಿ ಸಂಚಾಲಕರಾದ ಶ್ರೀ ಪಿ. ಲಕ್ಷ್ಮೀನಾರಾಯಣ ರಾವ್, ಸಾಂಸ್ಕೃತಿಕ ಸಮಿತಿಯ ಸಂಚಾಲಕರಾದ ಶ್ರೀ ಬಿ.ಕೆ ಧನಂಜಯ ರಾವ್, ಧಾರ್ಮಿಕ ಸಮಿತಿ ಸಂಚಾಲಕರಾದ ಶ್ರೀ ಎಂ.ಎಸ್ ಅರುಣ್ ಕುಮಾರ್, ಕ್ರೀಡಾ ಸಂಚಾಲಕರಾದ ಶ್ರೀ ದಿನೇಶ್ ಕುಮಾರ್, ದಿಶಾ ಇವರು ಉಪಸ್ಥಿತರಿದ್ದರು. ಶ್ರೀಮತಿ ನಿಶಾ, ಶ್ರೀಮತಿ ಶುಭಾ, ಶ್ರೀಮತಿ ರೂಪಾ ನಿರ್ವಹಿಸಿದ ಕಾರ್ಯಕ್ರಮದಲ್ಲಿ ಶ್ರೀ ಬಿ.ಕೆ ಧನಂಜಯ ರಾವ್ ಸ್ವಾಗತಿಸಿದರು. ಪವನ್ ರಾವ್ ವಂದಿಸಿದರು.

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸ್ಶೆಟಿ (ನಿ.)**
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
"ಗೃಹ ಸಾಲ"
ಸಂಘದ ಪ್ರಾಥಮಿಕ ಸದಸ್ಯರಿಗೆ 10.00%
(ಷರತ್ತುಗಳು ಅನ್ವಯ)

ಆಭರಣ ಸಾಲಕ್ಕೆ ಯಾವುದೇ ಸೇವಾ ಶುಲ್ಕ, ತೆರಿಗೆ ಇರುವುದಿಲ್ಲ.

| | | |
|---|---|---|
| ಗೃಹ ಸಾಲ | : | 10% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 15% |
| ಆಭರಣ ಸಾಲ | : | 12% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 11.5% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ
ಪ್ರಧಾನ ಕಛೇರಿ (☎ 2522408) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114) ಬ್ರಹ್ಮಾವರ ಶಾಖೆ (☎ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ



*Dr. Sanath S. Rao*
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST
Clinic : 0820-6529474
Mobile : 9886093199
drsanathrao@gmail.com

**JALAJA SKIN CLINIC**
1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.



ಡಾ। ವಿಜಯಾ ರಾವ್ ವೈ.ಬಿ
ಹೆರಿಗೆ ಹಾಗೂ ಸ್ತ್ರೀರೋಗ ತಜ್ಞರು

**Dr. Vijaya Rao Y.B.**
MBBS DGO (DNB)
Consultant Obst. & Gynaecologist
Reg. No. 34499
Mobile : 9481230608
Email : vijayayb12@gmail.com

Indrani Maternity Clinic, Aisiri Complex,
Near Railway Station Bus Stop, Kunjibettu Post, Udupi - 576 102

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 576 102.

### 2022-23ನೇ ಸಾಲಿನ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಸಮಾಜದ ಹೆತ್ತವರು/ಪೋಷಕರು ಮೇಲಿನ ಸಂಘದ ಸದಸ್ಯರಾಗಿದ್ದು ಅವರ ಮಕ್ಕಳು ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್, ಬಿ.ಎಡ್, ಡಿಪ್ಲೊಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿದ್ದು, ಹೆತ್ತವರ ವಾರ್ಷಿಕ ಆದಾಯವು ರೂ.3,00,000/-ಕ್ಕೆ ಮೀರದ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಸಂಘದ ವಿದ್ಯಾರ್ಥಿವೇತನ ಅರ್ಜಿ ಫಾರಂ(ಶ್ರೀ ಶಾರದಾ ಮಂಟಪದಲ್ಲಿ ಲಭ್ಯವಿದೆ)ನ್ನು ಪೂರ್ಣ ಪ್ರಮಾಣದಲ್ಲಿ ಭರ್ತಿಗೊಳಿಸಿ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿಯೊಂದಿಗೆ ದಿನಾಂಕ 25.09.2022 ರೊಳಗೆ ಶ್ರೀ ಶಾರದಾ ಮಂಟಪಕ್ಕೆ ತಲುಪಿಸಬೇಕು.

**- ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

### ಡಾ। ದಯಾನಂದ ಎಸ್.ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**2022-2023**

ಡಾ। ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು ''ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ''ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟಿನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. **2022-2023ನೇ** ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ** ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. **ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು.** ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು **ಕೈಬರಹದಲ್ಲಿ ಅರ್ಜಿ ಫಾರಂ ಬರೆದು ಪೋಷಕರ ಸಹಿಯೊಂದಿಗೆ,** ಪರೀಕ್ಷೆಯ ಅಂಕಪಟ್ಟಿ ಹಾಗೂ ವ್ಯಾಸಂಗ ಪ್ರಮಾಣ ಪತ್ರ, ಬ್ಯಾಂಕ್ ಖಾತೆಯ ವಿವರಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ **ತಾ.25-09-2022**ರ ಒಳಗೆ ತಲಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳೂ ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪ್ರಮಾಣ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ಫೋನ್ : 0820-2522408)ಯಲ್ಲಿ ವಿಚಾರಿಸಬಹುದು.**

**-ಅಧ್ಯಕ್ಷರು, ವಿದ್ಯಾರ್ಥಿ ವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

### ಅಂಬಲ್ಪಾಡಿ ಕೃಷ್ಣ ರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ 2022-2023

**ಉಡುಪಿ ಮತ್ತು ದ.ಕ. ಜಿಲ್ಲೆಗಳ** ವಿಶ್ವವಿದ್ಯಾಲಯದಲ್ಲಿ ಕಲಿಯುವ ಸ್ನಾತಕೋತ್ತರ ಪದವಿಯಲ್ಲಿ ಎಲ್ಲಾ ವಿಷಯಗಳಲ್ಲಿ ರ್‍ಯಾಂಕ್ ಗಳಿಸಿದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಬಿಳಿ ಹಾಳೆಯಲ್ಲಿ ಬರೆದು, ಅದರೊಟ್ಟಿಗೆ ರ್‍ಯಾಂಕ್ ಸಿಕ್ಕಿದ ಬಗ್ಗೆ ಸೂಕ್ತ ವಿವರ, ಬ್ಯಾಂಕ್ ಖಾತೆಯ ವಿವರಗಳೊಂದಿಗೆ **ತಾ.25-09-2022**ರೊಳಗೆ **ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ** ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ.

**- ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

### ಉದಯಚಂದ್ರ ಪ್ರತಿಭಾ ಪುರಸ್ಕಾರ 2022-2023

ಸಂಘದ ಯುವವೇದಿಕೆಯ ಆಶ್ರಯದಲ್ಲಿ **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ** ನಮ್ಮ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರ ನೀಡಲಾಗುವುದು. **2021-22ನೇ** ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪದವಿಪೂರ್ವ ಮೂರು ವಿಭಾಗಗಳಲ್ಲಿ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಒಬ್ಬೊಬ್ಬ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ಅಂಕಪಟ್ಟಿಯ ಪ್ರತಿ, ವಿಳಾಸ, ಫೋನ್ ನಂಬ್ರ, ಬ್ಯಾಂಕ್ ಖಾತೆಯ ವಿವರಗಳೊಂದಿಗೆ ಅರ್ಜಿಯನ್ನು **ಅಧ್ಯಕ್ಷರು, ಯುವವೇದಿಕೆ, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು ಉಡುಪಿ - 576 102** ಇಲ್ಲಿಗೆ **ತಾ.25-09-2022**ರೊಳಗೆ ಕಳುಹಿಸಿ ಕೊಡಬೇಕು.

**- ಅಧ್ಯಕ್ಷರು, ಯುವ ಮತ್ತು ಕ್ರೀಡಾ ವೇದಿಕೆ.**

## ದಿ। ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ ಕುಳಾಯಿ

**ಕೋಂ.ಕೆ. ಸದಾಶಿವ ಶಾಸ್ತ್ರಿ, 3-68(7), ಶ್ರೀ ವಿಷ್ಣುಮೂರ್ತಿ ದೇವಸ್ಥಾನ ರಸ್ತೆ, ಕುಳಾಯಿ-575019. ಮೊ : 8762235801.**

### ಪ್ರತಿಭಾ ಪುರಸ್ಕಾರ

2021-22ರ ಸಾಲಿನ ಶೈಕ್ಷಣಿಕ ವರ್ಷದ ಪ್ರೌಢಶಾಲಾ (ಎಸ್.ಎಸ್.ಎಲ್.ಸಿ.) ಮತ್ತು ಪದವಿ ಪೂರ್ವ ಶಿಕ್ಷಣದ ಅಂತಿಮ ಪರೀಕ್ಷೆಯಲ್ಲಿ (ಪಿ.ಯು.ಸಿ.) ವಿಶಿಷ್ಟ ಶ್ರೇಣಿಯಲ್ಲಿ (85% ಅಧಿಕ) ತೇರ್ಗಡೆಯಾದ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈರಸ್ತೆ, ಕರಂಗಲ್ಪಾಡಿ, ಮಂಗಳೂರು-4 ಇಲ್ಲಿ ತಾ.09.10.2022ರಂದು ದಸರಾ ಪ್ರಯುಕ್ತ ನಡೆಯುವ ನಾಡಹಬ್ಬದಂದು ಪ್ರತಿಷ್ಠಾನದ ವತಿಯಿಂದ ಅಭಿನಂದಿಸಲಾಗುವುದು. ದ.ಕ. ಮತ್ತು ಉಡುಪಿ ಜಿಲ್ಲಾ ಅರ್ಹ ಆಸಕ್ತ ವಿದ್ಯಾರ್ಥಿ/ವಿದ್ಯಾರ್ಥಿನಿಯರು ತಮ್ಮ ಅಂಕ ಪಟ್ಟಿಯ ಯಥಾ ನಕಲು, ವಿಳಾಸ, ದೂರವಾಣಿ ಸಂಖ್ಯೆ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಇತ್ಯಾದಿಗಳನ್ನು **ತಾ.20.09.2022**ರ ಒಳಗಾಗಿ ಮೇಲ್ಕಾಣಿಸಿದ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ.

**-ಕೆ. ಸದಾಶಿವ ಶಾಸ್ತ್ರೀ, 8762235801**

## ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**ಉಡುಪಿ ಕುಕ್ಕಿಕಟ್ಟೆಯ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಯ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.)** ವತಿಯಿಂದ **2022-23ನೇ** ಸಾಲಿನ **ದಿ। ಡಾ। ವೈ. ಚಂದ್ರಶೇಖರರಾವ್ ಸ್ಮಾರಕ ವಿದ್ಯಾರ್ಥಿವೇತನಕ್ಕಾಗಿ** ಪ್ರತಿಭಾನ್ವಿತ ಹಾಗೂ ಆರ್ಥಿಕ ಸಹಾಯ ಅಗತ್ಯವಿರುವ ತಾಂತ್ರಿಕ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗಾಗಿ **ದಿ। ಸಾತ್ವಿಕ್ ಶಾಸ್ತ್ರಿ ಸ್ಮಾರಕ ವಿದ್ಯಾರ್ಥಿವೇತನಕ್ಕಾಗಿಯೂ** ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಕೈಬರಹದ ಅರ್ಜಿಯಲ್ಲಿ ತಮ್ಮ ವಿವರಗಳೊಂದಿಗೆ ಆದಾಯ ಹಾಗೂ ವ್ಯಾಸಂಗ ದೃಢಪತ್ರಿಕೆಗಳನ್ನು ಲಗತ್ತಿಸಿರಬೇಕು. ತಂದೆ-ತಾಯಿಯರ ವೃತ್ತಿ, ವಿಳಾಸ, ದೂರವಾಣಿ ಸಂಖ್ಯೆ ಹಾಗೂ ನಿಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು (ಪಾಸ್ ಬುಕ್ಕಿನ ಮೊದಲ ಹಾಳೆಯ ಪ್ರತಿ) ಅರ್ಜಿಯಲ್ಲಿ ನಮೂದಿಸಿರಬೇಕು. ಕ್ರಮಬದ್ಧವಾಗಿ ಬರೆದ ಅರ್ಜಿಗಳನ್ನು ಮಾತ್ರ ಗಮನಿಸಲಾಗುವುದು. ಅರ್ಜಿ ಕಳುಹಿಸಲು ಕೊನೆಯ **ದಿನಾಂಕ 30-11-2022**. ಅರ್ಜಿಯನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

**ಡಾ। ವೈ.ಸುದರ್ಶನ ರಾವ್,**

**ಇಂಚರ ಸರ್ಜಿಕಲ್ ಕ್ಲಿನಿಕ್. ಎ.ಜೆ.ಅಲ್ಸೆ ರಸ್ತೆ, ಪ್ರಸಾದ ನೇತ್ರಾಲಯದ ಎದುರು, ಉಡುಪಿ-576101**

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ-576101.

### 2021-22ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸು

(ಸದಸ್ಯರಿಗೆ ಮಾತ್ರ)

ಮಾನ್ಯ ಸದಸ್ಯ ಬಾಂಧವರೇ, ತಾ. 10.07.2022

ನಮ್ಮ ಸಂಘದ 2021-22ನೇ ಸಾಲಿನ ವಾರ್ಷಿಕ ಮಹಾಸಭೆಯು **ದಿನಾಂಕ 11.09.2022ನೇ ರವಿವಾರ** ಸಂಜೆ ಘಂಟೆ 4.00 ಕ್ಕೆ ಸರಿಯಾಗಿ **"ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪ"**ದಲ್ಲಿ ನಡೆಯಲಿರುವುದು. **ಸಂಘದ ಸದಸ್ಯರೆಲ್ಲರೂ** ಈ ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

**ವಿಷಯ ಸೂಚಿ**

1. ಪ್ರಾರ್ಥನೆ
2. ಶ್ರದ್ಧಾಂಜಲಿ
3. ಸ್ವಾಗತ
4. 2021-22ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸಿನ ಅಂಗೀಕಾರ.
5. 2020-21ನೇ ಸಾಲಿನ ವಾರ್ಷಿಕ ಮಹಾಸಭೆಯ ವರದಿಯ ಮಂಡನೆ ಮತ್ತು ಅಂಗೀಕಾರ.
6. 2021-22ನೇ ವರ್ಷದ ಕಾರ್ಯಕ್ರಮಗಳ ಮತ್ತು ಚಟುವಟಿಕೆಗಳ ವರದಿಯ ಮಂಡನೆ ಮತ್ತು ಅಂಗೀಕಾರ.
7. 2021-22ನೇ ವರ್ಷದ ಆಯ-ವ್ಯಯ ಮತ್ತು ಆಸ್ತಿ-ಜವಾಬ್ದಾರಿ ತಃಖ್ತೆಗಳ ಪರಿಶೋಧಿತ ವರದಿಯ ಮಂಡನೆ ಮತ್ತು ಅಂಗೀಕಾರ.
8. 2022-23ನೇ ವರ್ಷದ ಅಂದಾಜು ಆಯ-ವ್ಯಯ ಪಟ್ಟಿಯ ಮಂಡನೆ ಮತ್ತು ಅಂಗೀಕಾರ.
9. 2022-23ನೇ ವರ್ಷಕ್ಕೆ ಲೆಕ್ಕಪರಿಶೋಧಕರ ನೇಮಕ.
10. ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳು.
11. ಅಧ್ಯಕ್ಷರ ಮಾತು.
12. ಧನ್ಯವಾದ

(ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ)

-ಪಿ. **ಪ್ರಭಾಕರ ಭಂಡಿ,** ಕಾರ್ಯದರ್ಶಿ

**ವಿ.ಸೂ : ಚರ್ಚೆಯ ವಿಷಯ ಇದ್ದಲ್ಲಿ ಅದನ್ನು ದಿನಾಂಕ 04.09.2022 ಸಂಜೆ 6 ಗಂಟೆಯ ಒಳಗೆ (ಕಛೇರಿ ಕೆಲಸ ಸಮಯದಲ್ಲಿ) ಕಾರ್ಯದರ್ಶಿಯವರಿಗೆ ಲಿಖಿತ ಮೂಲಕ ಕಛೇರಿಗೆ ತಲುಪಿಸಬೇಕು.**

## ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ (ರಿ). ಮೂಡುಬಿದಿರೆ



ನಮ್ಮ ಸಂಘದ ವಾರ್ಷಿಕ ಮಹಾಸಭೆ ಮತ್ತು ಆಟಿಕೂಟ ಸಮಾರಂಭವನ್ನು ತಾ.07.08.2022 ರ ರವಿವಾರ ಕಡಲಕೆರೆ ಜಯರಾಮ ರಾಯರ ಮನೆಯಲ್ಲಿ ಪುರೋಹಿತರಾದ ಪುಷ್ಪ ರಾಜ ಭಟ್ ಇವರು ನಮ್ಮ ಸಂಘದ ಗೌರವ ಅಧ್ಯಕ್ಷರಾದ ಶ್ರೀ ಸುರೇಶ ಕುಮಾರ್ ಲಾಡಿ ದಂಪತಿಗಳ ಉಪಸ್ಥಿತಿಯಲ್ಲಿ ಬೆಳಗ್ಗೆ 8.00ಕ್ಕೆ ಪ್ರಾರ್ಥನೆಯೊಂದಿಗೆ ಶ್ರೀ ಸತ್ಯ ನಾರಾಯಣ ಪೂಜೆ ಹಾಗೂ ಶ್ರೀ ಸುಬ್ಬರಾವ್ ಪೊಳಲಿ ಇವರ ನೇತೃತ್ವದಲ್ಲಿ ನಮ್ಮ ಮಹಿಳಾ ಭಜನಾ ತಂಡದ ಭಜನೆ ಹಾಗೂ 10.30ಕ್ಕೆ ಮಹಾ ಪೂಜೆಯು ಎಲ್ಲಾ ಸಮಾಜ ಬಾಂಧವರೊಂದಿಗೆ ಸಂಪನ್ನಗೊಂಡಿತು. ಅಧ್ಯಕ್ಷರಾದ ಎಂ. ದೇವಾನಂದ್ ಭಟ್ ಬೆಳುವಾಯಿ ಇವರ ನೇತೃತ್ವದಲ್ಲಿ ಆರಂಭವಾದ ಮಹಾಸಭೆ ಕುಮಾರಿ ಶುಭಾಂಜನಳ ಪ್ರಾರ್ಥನೆಯೊಂದಿಗೆ ಹಾಗೂ ವೇದಿಕೆಯಲ್ಲಿ ಇರುವ ಗಣ್ಯರ ಉಪಸ್ಥಿತಿಯಲ್ಲಿ ದೀಪ ಪ್ರಜ್ವಲಿಸುವ ಮೂಲಕ ಆರಂಭವಾಯಿತು. ಶ್ರೀ ಬೊಕ್ಕಸ ಚಂದ್ರಶೇಖರ ರಾವ್ ಸ್ವಾಗತಿಸಿ, ರಾಯಿ ರಾಜಕುಮಾರ ಪ್ರಾಸ್ತಾವಿಕ ಮಾತನಾಡಿ ಗತ ವರ್ಷದಲ್ಲಿ ಅಗಲಿದ ಬಂಧುಗಳಿಗೆ ಶ್ರದ್ಧಾಂಜಲಿ ಅರ್ಪಿಸಿದರು. ಪ್ರಧಾನ ಕಾರ್ಯದರ್ಶಿ ಸುರೇಶ ರಾವ್ ಬೊಕ್ಕಸ 2021–22ನೇ ಸಾಲಿನ ವರದಿ ಮಂಡಿಸಿದರು. ಖಜಾಂಚಿ ವಸಂತ ರಾಜ ಬಿ.ಕೆ. 2021–22ನೇ ಲೆಕ್ಕಪತ್ರ ಮಂಡಿಸಿದರು. ಸಮಾಜದ ಹಿರಿಯ ಬಾಂಧವರಾದ ಶ್ರೀಮತಿ ಸುಲೋಚನ ಕುಂಗೂರು, ಶ್ರೀಮತಿ ಅಂಜನಾ ದೇವಿ ಬೆಳುವಾಯಿ, ಶ್ರೀಮತಿ ಇಂದಿರಾ ಜೆ. ರಾವ್, ಮೂಡುಬಿದಿರೆ. ಇವರನ್ನು ಸನ್ಮಾನಿಸಲಾಯಿತು. ಸನ್ಮಾನ ಪತ್ರವನ್ನು ಪ್ರಣವಿ ರಾವ್ ಶಿರ್ತಾಡಿ, ಸುಮಾ ರಾಜಕುಮಾರ ಹಾಗೂ ದಿವ್ಯಶ್ರೀ ರಾವ್ ವಾಚಿಸಿದರು.

ಡಾ। ಎಚ್.ಹರಿಹರ ಪ್ರಸಾದ್, ಮಂಗಳೂರು, ಮುಖ್ಯಸ್ಥರು ರಸ ಶಾಸ್ತ್ರ ಮತ್ತು ಭೈಶಜ್ಯ ಕಲ್ಪನ ಕರ್ನಾಟಕ ಆಯುರ್ವೇದ ಮೆಡಿಕಲ್ ಕಾಲೇಜು ಮಂಗಳೂರು. ಇವರು ಆಟಿದ ಸಮಯದಲ್ಲಿ ಗಿಡ ಮೂಲಿಕೆಗಳ ಔಷಧಿಯ ಗುಣ ಮತ್ತು ಅದರ ಮಹತ್ವ ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಹಾಗೂ ಸಮಾಜದ ಬಂಧುಗಳ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರಗಳನ್ನು ನೀಡಿದರು. ಪ್ರತಿಭಾ ಪುರಸ್ಕಾರದಲ್ಲಿ SSLCಯಲ್ಲಿ ಪೂರ್ಣಾಂಕ ಗಳಿಸಿದ ಶ್ರೀಜಾ ಹೆಬ್ಬಾರ್ ಇವರನ್ನು ವಿಶೇಷ ಅಭಿನಂದನೆ ಹಾಗೂ ಉಳಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುವ ಮೂಲಕ ಗೌರವಿಸಲಾಯಿತು. ಅಭ್ಯಾಗತರಾಗಿ ಶ್ರೀ ಹರ್ಷ ಕುಮಾರ್ ಕೇದಿಗೆ ಮಾಲೀಕರು ಪ್ರಮೋದ್ ಅಟೋ ಮೊಬೈಲ್ ಮಂಗಳೂರು ಇವರು ಸಂಘದ ಕಾರ್ಯಕ್ರಮಗಳನ್ನು ಪ್ರಶಂಸಿದರು. ಶ್ರೀ ಎಂ. ದೇವಾನಂದ್ ಭಟ್ ಅಧ್ಯಕ್ಷೀಯ ಮಾತುಗಳನ್ನು ಆಡುತ್ತಾ ಒಗ್ಗಟ್ಟಿನ ಮೂಲಕ ಸಂಘವನ್ನು ಉಳಿಸಿ ಬೆಳೆಸುವ ಉದ್ದೇಶದಿಂದ ಎಲ್ಲಾ ಸಮಾಜದ ಬಾಂಧವರು ಕೈ ಜೋಡಿಸಬೇಕೆಂದು ವಿನಂತಿಸಿದರು. ಅಲ್ಲದೆ ಪಡುಬಿದ್ರಿ, ಕಾರ್ಕಳ, ಸುರತ್ಕಲ್, ಬಂಟ್ವಾಳ, ಮಂಗಳೂರು ಸಂಘದ ಹೆಚ್ಚಿನ ಸಮಾಜ ಬಾಂಧವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಸಮಾರಂಭದ ಶೋಭೆಯನ್ನು ಹೆಚ್ಚಿಸಿದರು. ಅವರೆಲ್ಲರಿಗೂ ನಾವು ಆಭಾರಿಗಳಾಗಿದ್ದೇವೆ.

ನಿರೂಪಣೆಯಲ್ಲಿ ಆದರ್ಶ ರಾವ್ ಪುತ್ತಿಗೆ, ವಿಶೇಷ ಅಭಿನಂದನೆಯಲ್ಲಿ ಶ್ರೀಮತಿ ಚೈತ್ರ ಆಕಾಶ್ ರಾವ್, ಬಹುಮಾನ ವಿತರಣೆಯಲ್ಲಿ ವಲ್ಲೀಶ ರಾವ್ ಪುತ್ತಿಗೆ, ವಂದನಾರ್ಪಣೆಯಲ್ಲಿ ಕುಮಾರಿ ಡಾ। ದೀಪ್ತಿ ರಾವ್ ಪುತ್ತಿಗೆ, ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕುಮಾರಿ ಶುಭಾಂಜನ ಬೆಳುವಾಯಿ ಸಹಕರಿಸಿದರು.

ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಆಟಿದ ಕೂಟದ ಭೋಜನದೊಂದಿಗೆ ಕಾರ್ಯಕ್ರಮ ಕೊನೆಗೊಂಡಿತು.



ಎಮ್. ದೇವಾನಂದ್ ಭಟ್ Cell : 9845644556

ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ



ಬೆಳ್ವಾಯಿ–574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655

**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142): for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)

## ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಪಾದೆಬೆಟ್ಟು, ಪಡುಬಿದ್ರಿ

ಪ್ರಿಯರೇ

ಸ್ವಸ್ತಿ! ಶ್ರೀ ಶುಭಕೃತ್ ಸಂವತ್ಸರದ ಭಾದ್ರಪದ ಬಹುಳ ಸಪ್ತಮಿ ತಾ.17.09.2022ನೇ ಶನಿವಾರದಂದು ಶ್ರೀ ಮಹಾವಿಷ್ಣುಪ್ರೀತ್ಯರ್ಥವಾಗಿ ಶ್ರೀದೇವರ ಸನ್ನಿಧಿಯಲ್ಲಿ

**ಸೋಣಾರತಿ–ಹೂವಿನಪೂಜೆ ಹಾಗೂ ಲಕ್ಷತುಲಸೀ ಅರ್ಚನೆಯನ್ನು**

ದೇವಳದ ತಂತ್ರಿಯವರಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ಮಾರ್ಗದರ್ಶನದಲ್ಲಿ ನೆರವೇರಲಿದ್ದು, ಭಕ್ತಾದಿಗಳು ಈ ಧಾರ್ಮಿಕ ಕಾರ್ಯಕ್ರಮಕ್ಕೆ ಆಗಮಿಸಿ ಭಾಗವಹಿಸಿ ಭೋಜನ ಪ್ರಸಾದ ಸ್ವೀಕರಿಸಿ ಶ್ರೀ ವಿಷ್ಣುಮೂರ್ತಿ ದೇವರ ಕೃಪಾ ವಿಶೇಷಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

**ಆಡಳಿತ ಮಂಡಳಿ, ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಪಾದೆಬೆಟ್ಟು,**
**ಸ್ಥಾನಿಕ ಬ್ರಾಹ್ಮಣ ಸಭಾ, ಪಡುಬಿದ್ರಿ ಅಖಿಲ ಸ್ಥಾನಿಕ ಬ್ರಾಹ್ಮಣ ಸಭಾ, ಪಡುಬಿದ್ರಿ**
**ಅಖಿಲ ಸ್ಥಾನಿಕ ಬ್ರಾಹಣ ಪುರೋಹಿತರ ಹಾಗೂ ಅರ್ಚಕರ ಪರಿಪಾಲನ ಸಭಾ**

**ವಿ.ಸೂ. : ಸೋಣಾರತಿ ಹೂವಿನ ಪೂಜೆ ಮಾಡಿಸುವವರು ಬರುವಾಗ ಹೂ, ಹಣ್ಣುಕಾಯಿ ಮತ್ತು ಪೂಜೆಗೆ ರೂ.350/– ತರಬೇಕು. ಪೂಜೆಯ ಸಮಯ ಪ್ರತಿದಿನ ಸಂಜೆ 6.30ರಿಂದ 7.30. ಹೆಚ್ಚಿನ ಮಾಹಿತಿಗೆ ದಿವಾಕರ ರಾವ್ (9902169119), ಬಿ.ಜಯರಾಮ ರಾವ್ (9844545040), ವಿಜಯ ದೇವರಾಯ ಶರ್ಮ (8970485179), ಸುಧಾಕರ ಬೆಳ್ಳೆ (9845193103) ಇವರನ್ನು ಸಂಪರ್ಕಿಸಬಹುದು.**

**–ಆಡಳಿತ ಮಂಡಳಿ, ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಪಾದೆಬೆಟ್ಟು,**

## ಶ್ರೀಶಾರದಾ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ (ನಿ.)

**L.No.31017, ಭೂವರಾಹ ಸಂಕೀರ್ಣ, ವಾದಿರಾಜ ರಸ್ತೆ, ಉಡುಪಿ –576101. ದೂರವಾಣಿ : 2522408**

ತಾ. : 16–07–2022

### 2021–2022ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸು

ಮಾನ್ಯ ಸದಸ್ಯರೇ,

ನಮ್ಮ ಸಂಘದ 2021–2022ನೇ ಸಾಲಿನ ವಾರ್ಷಿಕ ಮಹಾಸಭೆಯು ತಾ.17.09.2022ನೇ ಶನಿವಾರ ಅಪರಾಹ್ನ ಘಂಟೆ 3–30ಕ್ಕೆ ಸರಿಯಾಗಿ ನಮ್ಮ ಕಛೇರಿಯಿರುವ ಭೂವರಾಹ ಸಂಕೀರ್ಣದ ಸಭಾಂಗಣದಲ್ಲಿ ನಡೆಯಲಿರುವುದು. ಮಾನ್ಯ ಸದಸ್ಯರೆಲ್ಲರೂ ಸಕಾಲದಲ್ಲಿ ಹಾಜರಿದ್ದು ಸಭೆಯ ನಡಾವಳಿಗಳಲ್ಲಿ ಭಾಗಿಗಳಾಗಬೇಕಾಗಿ ವಿನಂತಿ.

**ಆಡಳಿತ ಮಂಡಳಿಯ ನಿರ್ಣಯದಂತೆ**

| | |
|---|---|
| **ಪಟ್ಟಾಭಿರಾಮ ಎನ್.ಎಸ್** | **ಎಂ.ಸದಾನಂದ ರಾವ್** |
| ಕಾರ್ಯದರ್ಶಿ | ಅಧ್ಯಕ್ಷರು |

**ಕಾರ್ಯಕ್ರಮ ಸೂಚಿ**


1. ಪ್ರಾರ್ಥನೆ
2. ಸ್ವಾಗತ ಭಾಷಣ
3. ಮಹಾಸಭೆಯ ನೋಟೀಸನ್ನು ಓದಿ ಅಂಗೀಕರಿಸುವುದು.
4. ತಾ.20–11–2021ರಂದು ಜರಗಿದ ಮಹಾಸಭೆಯ ವರದಿಯ ಅಂಗೀಕಾರ.
5. 2021–2022ನೇ ಸಾಲಿನ ವಾರ್ಷಿಕ ವರದಿಯ ಅಂಗೀಕಾರ.
6. 2021–2022ನೇ ಸಾಲಿನ ಪರಿಶೋಧಿತ ಲೆಕ್ಕ ಪತ್ರಗಳ ಮಂಡನೆ ಮತ್ತು ಅಂಗೀಕಾರ.
7. 2021–2022ನೇ ಸಾಲಿನ ಅಂದಾಜು ಆಯ–ವ್ಯಯ ತಃಖ್ತೆಗಿಂತ ಹೆಚ್ಚಾದ ವೆಚ್ಚಗಳ ಪರಿಶೀಲನೆ ಮತ್ತು ಮಂಜೂರಾತಿ.
8. 2022–2023ನೇ ಸಾಲಿನ ಅಂದಾಜು ಆಯ–ವ್ಯಯ ಪಟ್ಟಿಯ ಅಂಗೀಕಾರ.
9. 2021–2022ನೇ ಸಾಲಿನ ನಿವ್ವಳ ಲಾಭದ ಹಂಚಿಕೆ.
10. 2022–2023ನೇ ಸಾಲಿಗೆ ಶಾಸನಾತ್ಮಕ ಲೆಕ್ಕ ಪರಿಶೋಧಕರ ನೇಮಕ
11. ಸಂಘದ ಉಪನಿಬಂಧನೆಯ ತಿದ್ದುಪಡಿಯ ಮಂಜೂರಾತಿ.
12. ಅಧ್ಯಕ್ಷರ ಅನುಮತಿ ಮೇರೆಗೆ ಮಹಾಸಭೆಯ ವ್ಯಾಪ್ತಿಗೆ ಒಳಪಟ್ಟು ಬರಬಹುದಾದ ಇತರ ವಿಷಯಗಳು.
13. ವಂದನಾರ್ಪಣೆ
14. ರಾಷ್ಟ್ರಗೀತೆ

ವಿ.ಸೂ. :


1. ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳೇನಾದರೂ ಇದ್ದಲ್ಲಿ ಮಹಾಸಭೆಯ ದಿನಾಂಕದ 7 ದಿನಗಳ ಮೊದಲು ಸಂಘದ ಅಧ್ಯಕ್ಷರಿಗೆ ಅಥವಾ ಕಾರ್ಯದರ್ಶಿಯವರಿಗೆ ಲಿಖಿತ ಮೂಲಕ ತಿಳಿಸತಕ್ಕದ್ದು.
2. ಲಾಭಾಂಶ ಹಾಗೂ ಪಾಲು ಪತ್ರ ಪಡೆಯದ ಸದಸ್ಯರು ಕಛೇರಿ ಸಮಯದಲ್ಲಿ ಪಡೆಯಬೇಕಾಗಿ ವಿನಂತಿ. ಇಲ್ಲದಿದ್ದಲ್ಲಿ 5 ವರ್ಷಕ್ಕೆ ಮೇಲ್ಪಟ್ಟು ಪಡೆಯದಿರುವ ಲಾಭಾಂಶದ ಹಣವನ್ನು ನಿಯಮದಂತೆ ಕಾಯ್ದಿಟ್ಟ ನಿಧಿಗೆ ವರ್ಗಾಯಿಸಲಾಗುವುದು.
3. ಸಹಕಾರ ಕಾಯ್ದೆ ಹಾಗೂ ಸಂಘದ ಉಪನಿಯಮಗಳನ್ವಯ ಸದಸ್ಯರು 5 ಮಹಾಸಭೆಗಳಲ್ಲಿ ಕಡ್ಡಾಯವಾಗಿ 2 ಮಹಾಸಭೆಗಳಿಗೆ ಹಾಜರಾಗಬೇಕು ಮತ್ತು ಸತತ 2 ವರ್ಷಗಳ ಕಾಲ ನಿಗದಿತ ಕನಿಷ್ಠ ವ್ಯವಹಾರವನ್ನು ಮಾಡಬೇಕಾಗಿದ್ದು, ತಪ್ಪಿದಲ್ಲಿ ಅಂತಹ ಸದಸ್ಯರಿಗೆ ಮತದಾನದ ಹಕ್ಕು ಇರುವುದಿಲ್ಲ.
4. ಸಂಘದ ಪ್ರಾಥಮಿಕ ಸದಸ್ಯರ ಮಕ್ಕಳಿಗೆ ವಿದ್ಯಾರ್ಥಿವೇತನ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ.85ಕ್ಕಿಂತ ಅಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳು ಸಂಘದ ಕಛೇರಿಯಿಂದ ಅರ್ಜಿಯ ಪ್ರತಿಯನ್ನು ಪಡೆದು ತಮ್ಮ ಅಂಕಪಟ್ಟಿಯ ಪ್ರತಿಯನ್ನು ಮತ್ತು ವ್ಯಾಸಂಗ ಮಾಡುತ್ತಿರುವ ಬಗ್ಗೆ ಕಾಲೇಜಿನ ಮುಖ್ಯಸ್ಥರಿಂದ ಪಡೆದ ವ್ಯಾಸಂಗ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಲಗತ್ತಿಸಿ, ತಮ್ಮ ಪೋಷಕರ ಸದಸ್ಯ ನಂಬ್ರ ನೋಂದಾಯಿಸಿ ದಿನಾಂಕ 10.09.2022ರೊಳಗಾಗಿ ಸಂಘಕ್ಕೆ ಸಲ್ಲಿಸಬೇಕಾಗಿದ್ದು ದಿನಾಂಕ 17.09.2022ರಂದು ನಡೆಯು ವಾರ್ಷಿಕ ಮಹಾಸಭೆಯಲ್ಲಿ ವಿದ್ಯಾರ್ಥಿವೇತನ ವಿತರಿಸಲಾಗುವುದು.

ಸದಸ್ಯರು ಸಭೆಗೆ ಬರುವಾಗ ಈ ನೋಟೀಸನ್ನು / ವರದಿಯನ್ನು ತಪ್ಪದೇ ತರಬೇಕಾಗಿ ವಿನಂತಿ.

## ಶ್ರೀ ಶಾರದಾ ದೇವಸ್ಥಾನದಲ್ಲಿ ಗುರುಪೂರ್ಣಿಮಾ ಆಚರಣೆ





ತಾ.13.07.2022ರಂದು ಸಂಜೆ ಶ್ರೀ ಶಾರದಾ ದೇವಸ್ಥಾನದಲ್ಲಿ ಗುರುಪೂರ್ಣಿಮಾ ಕಾರ್ಯಕ್ರಮ ಜರಗಿತು. ಸಂಘದ ಅಧ್ಯಕ್ಷರಾದ ಮಂಜುನಾಥ ಹೆಬ್ಬಾರ್, ಸಂಘದ ಕಾರ್ಯದರ್ಶಿ ಪ್ರಭಾಕರ ಭಂಡಿ, ಮಹಿಳಾ ವೇದಿಕೆಯ ಸದಸ್ಯೆಯರು, ಅರ್ಚಕರು ಉಪಸ್ಥಿತರಿದ್ದರು.



ಮೈಸೂರು ಮಕ್ಕಳ ಕೂಟ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಾವಿದ್ಯಾಲಯದ ಆಶ್ರಯದಲ್ಲಿ ನಡೆದ ಶೀಮತಿ ಲಕ್ಷ್ಮಿ ನಾಗರಾಜ್ ದತ್ತಿ ಸ್ಮಾರಕ ಅಂತರಕಾಲೇಜು ಕರ್ನಾಟಕ ಶಾಸ್ತ್ರೀಯ ಸಂಗೀತ ಸ್ಪರ್ಧೆಯ ರಜತ ಮಹೋತ್ಸವದ ಉದ್ಘಾಟನೆಯ ಸಂದರ್ಭದಲ್ಲಿ ಶೃಂಗೇರಿ ಶಂಕರ ಮಠದ ಧರ್ಮದರ್ಶಿಗಳೂ ಆಗಿರುವ ಶೀಸತ್ಯಶಂಕರ ಬೊಳ್ಳಾವ ಅವರ ಪತ್ನಿ ವಿದುಷಿ ಶ್ರೀಮತಿ ನಾರಾಯಣೀ ಸತ್ಯಶಂಕರ ಬೊಳ್ಳಾವ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ ನಡೆಯಿತು.

## ಶ್ರೀಮತಿ ರಶ್ಮಿಯವರಿಗೆ ಡಾಕ್ಟರೇಟ್ ಪದವಿ



ಪಡುಬಿದ್ರಿಯ ಶ್ರೀ ಯೋಗಾನಂದ ಶಾಸ್ತ್ರಿ ಮತ್ತು ಲಲಿತಾಂಬ ದಂಪತಿಯ ಸುಪುತ್ರ ಅಭಿಜಿನ್ ಶಾಸ್ತ್ರಿ ಅವರ ಧರ್ಮಪತ್ನಿಯಾದ ಶ್ರೀಮತಿ ರಶ್ಮಿ ಇವರು ಮಂಡಿಸಿದ "ಪರ್ಫಾರ್ಮೆನ್ಸ್ ಆಫ್ ಸೋಷಿಯಲ್ ಎಂಟರ್ಪ್ರೈಸಸ್ ಸಪೋರ್ಟೆಡ್ ಬೈ ಅಶೋಕ ಫೌಂಡೇಶನ್ ಇನ್ ಕರ್ನಾಟಕ" ಎಂಬ ಸಂಶೋಧನಾ ಅಧ್ಯಯನಕ್ಕೆ ಮೈಸೂರು ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿಯನ್ನು ಪಡೆದಿರುತ್ತಾರೆ. ಪ್ರಸ್ತುತ ಇವರು ಬೆಂಗಳೂರಿನ ಆರ್.ವಿ. ಶಿಕ್ಷಣ ಸಂಸ್ಥೆಯ ಎಂಬಿಎ ವಿಭಾಗದಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ.



ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘದ 10ನೇ ನೂತನ ಶಾಖೆಯು ಮಂಗಳೂರಿನ ಪದವಿನಂಗಡಿಯಲ್ಲಿ ಗಣಹೋಮ ಕಾರ್ಯಕ್ರಮದೊಂದಿಗೆ ಉದ್ಘಾಟನೆಗೊಂಡಿತು. ಗಣಹೋಮದ ಕರ್ತೃಗಳಾಗಿ ನಿರ್ದೇಶಕರಾದ ಐ.ಪಿ.ನಾಗರಾಜ್ ದಂಪತಿಗಳು ಭಾಗವಹಿಸಿದ್ದರು. ಅಧ್ಯಕ್ಷರಾದ ಕರುಣ್ ರಾವ್ ಬೆಳ್ಳೆ, ಸಂಘದ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಮೈಸೂರಿನ ಜ್ಞಾನಶಕ್ತಿ ಸಾಂಸ್ಕೃತಿಕ ಸಭೆಯ 42ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ಮೊದಲಿಗೆ ರುದ್ರಪಠಣ ಹಾಗೂ ರುದ್ರಾಭಿಷೇಕ ನಡೆಸಲಾಯಿತು.**

ಶುಭಾಶಯಗಳೊಂದಿಗೆ
**ಹೆಬ್ಬಾರ್ ಎಂಟರ್‌ಪ್ರೈಸಸ್**
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

Ph : 98459 92859
**Ganesh Hebbar & Associates**
CHARTERED ACCOUNTANT
S.M.S.P. Complex, Udupi - 576 101.

ಕಾರ್ಕಳದಲ್ಲಿ ಪ್ರಥಮ
ತಾಜಾ ಹಾಗೂ ಉತ್ತಮ ಗುಣ ಮಟ್ಟದ ಎಲ್ಲಾ ರೀತಿಯ ಹಿಟ್ಟು ಒಂದೇ ಜಾಗದಲ್ಲಿ ಲಭ್ಯ.
ನಮ್ಮಲ್ಲಿ ಗೋಧಿ, ಜೋಳ, ಅಕ್ಕಿ, ರಾಗಿ ಹಿಟ್ಟು ಹಾಗೂ ಅಕ್ಕಿ ರವ ದೊರೆಯುತ್ತದೆ.
**ಪ್ರಕೃತಿ ಸ್ಟೋರ್ಸ್**
PFM
ಪ್ರಸಾದ್ ಭವನ (ವಿ. ಕೆ. ಡೆಕೋರೇಟರ್ಸ್ ಬಳಿ)
ಹೋಟೇಲ್ ಮಹಾಲಸಾ ಎದುರು, ತೆಳ್ಳಾರು ರಸ್ತೆ, ಕಾರ್ಕಳ
For The First Time We Are Introducing Fresh And Good Quality Of Rice, Ragi, Jowar & Wheat Flour Along With Rice Rava In Single Venue
Contact: Prakrithi Stores, Prasad Bhavana (Near: V. K. Decoratores), Opp: Hotel Mahalasa, Tellar Road, Karkala. Mob: 8296375933

*With Best Complimemts From*
SRI M. SHAILESH RAO B.E., Civil Ph : 9448624324
Civil Engineer & Contractor
**SRI MALAVIKA ASSOCIATES**
KALSANKA-UDUPI ROAD, UDUPI.
Website : shreemaalavikaassociates.com

## ಶ್ರೀಶಾರದಾ ವೇದಿಕೆಯ ಮಹಾಪೋಷಕರು

ದಿ। ಅಂಬಲಪಾಡಿ ಕೃಷ್ಣರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್ ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಎ. ರಾಘವೇಂದ್ರ ರಾವ್ ಮೈಸೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್ ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ। ಲೋಕೇಶ್ ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ। ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ, ಶ್ರೀ ನಂದಳಿಕ ಕೃಷ್ಣರಾವ್ ದೊಡ್ಡಣಗುಡ್ಡೆ, ಶ್ರೀ ಅಶೋಕ್ ತಂತ್ರಾಡಿ ಬೆಂಗಳೂರು, ಶ್ರೀಮತಿ ದೀಪಾಲಿ ಅಶೋಕ್ ಬೆಂಗಳೂರು, ಶ್ರೀ ತಂತ್ರಾಡಿ ಶಿವರಾಮ ಶ್ಯಾನುಭಾಗ್, ಶ್ರೀಮತಿ ಟಿ.ಹರಿಣಿ, ಶ್ರೀ ಪಿ.ಬಾಲಕೃಷ್ಣ ಬೆಂಗಳೂರು, ಎನ್.ಪದ್ಮನಾಭ ರಾವ್ ಬೆಂಗಳೂರು, ಶ್ರೀ ವಸಂತ ಕೇದಿಗೆ ಮಂಗಳೂರು

## ಗೃಹ ಪ್ರವೇಶ

ಶ್ರೀಯುತ ಎರ್ಮಾಳು ಅರುಣ್‌ಕುಮಾರ್ ರಾವ್ ಮತ್ತು ಶ್ರೀಮತಿ ಪೂರ್ಣಿಮಾ ಅರುಣ್‌ಕುಮಾರ್ ಇವರು ತಮ್ಮ ನೂತನ ಗೃಹ "ಸುಲೋಚನಿ", ಫ್ಲ್ಯಾಟ್ ನಂ–117, "ಬಿ" ಬ್ಲಾಕ್, ವಸುಂದ್ರ ಸೈಬರ್‌ನೆಸ್ಟ್, ಮೈಲಸಂದ್ರ, ಬೆಂಗಳೂರು–560059 ಇದರ ಗೃಹಪ್ರವೇಶವನ್ನು ದಿನಾಂಕ 17–06–2022 ರಂದು ಬಂಧು ಬಾಂಧವರೊಡಗೂಡಿ ನೆರವೇರಿಸಿದರು.

## ನಿಧನ



ಕರಾವಳಿ ಕರ್ನಾಟಕದ ಪ್ರಸಿದ್ಧ ನಂದಿಕೂರಿನ ಹೆಸರಾಂತ ಅಗರಬತ್ತಿ ವಿತರಕ ಸಂಸ್ಥೆ ದೇವಿಕೃಪಾ ಏಜನ್ಸಿಸ್ ನ ಸ್ಥಾಪಕ ದಿ। ದೇವರಾವ್ ಅವರ ಪತ್ನಿ, ಸಂಸ್ಥೆಯ ಸಹಪಾಲುದಾರೆ ಸರೋಜಿನಿ ಸಾಂತೂರು ದೇವರಾವ್ (81) ಅವರು ತಾ.16.07.2022ರಂದು ನಂದಿಕೂರಿನ ಸ್ವಗೃಹದಲ್ಲಿ ನಿಧನ ಹೊಂದಿದರು. ಮೃತರು ಪಡುಬಿದ್ರೆ ಸಂಘದ ಎಸ್.ಜನಾರ್ದನ ರಾವ್ ಸಹಿತ ಮೂವರು ಪುತ್ರರು ಮತ್ತು ಮೂವರು ಪುತ್ರಿಯರನ್ನು ಅಗಲಿದ್ದಾರೆ.

**** ****



ಶ್ರೀಮತಿ ಕೆ. ಶಾಂಭವಿ ರಾವ್ (ನಾಲೂರು) ಅವರು ತಮ್ಮ 77ನೇ ವಯಸ್ಸಿನಲ್ಲಿ ತಾ. 24–07–2022 ರಂದು ಬೆಂಗಳೂರಿನಲ್ಲಿ ಅಲ್ಪಕಾಲದ ಅನಾರೋಗ್ಯದಿಂದ ನಿಧನರಾದರು. ಮೃತರು ನಾಲ್ವರು ಪುತ್ರರನ್ನು ಅಗಲಿದ್ದಾರೆ.

**** ****



ಮುಂಬೈಯಲ್ಲಿ ವಾಸವಾಗಿರುವ ಸತೀಶ್ ಕುಮಾರ್ ತಮ್ಮ 77ನೇ ವಯಸ್ಸಿನಲ್ಲಿ ತಾ.06.07.2022ರಂದು ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರನ್ನು ಅಗಲಿದ್ದಾರೆ.

**** ****



ಒಳಕಾಡು ದಿನೇಶ್ ರಾವ್ ತಮ್ಮ 66ನೇ ವಯಸ್ಸಿನಲ್ಲಿ ತಾ.20.07.2022ರಂದು ಉಡುಪಿ ಸಂತೋಷ ನಗರದ ಸ್ವಗೃಹದಲ್ಲಿ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರನನ್ನು ಅಗಲಿದ್ದಾರೆ.

**** ****



ತಾ.20–07–2022 ರಂದು ಮೂಡಿಗೆರೆಯಲ್ಲಿ ದಿವಂಗತ ಶ್ರೀ ವಿಟ್ಟಲ್ ರಾವ್ (ಕಲಮೆ ಕುಟುಂಬ) ಅವರ ಪತ್ನಿ ಶ್ರೀಮತಿ ಸುಮತಿ ಅವರು ತಮ್ಮ 82 ನೇ ವಯಸ್ಸಿನಲ್ಲಿ ನಿಧನರಾದರು. ಮೃತರು ನಾಲ್ವರು ಪುತ್ರಿಯರನ್ನು ಅಗಲಿದ್ದಾರೆ.

**** ****



ಪಡುಬಿದ್ರಿ ಡಿ. ಶೇಖರ್ ರಾವ್ ಮತ್ತು ಶ್ರೀಮತಿ ಸುನೀತಾ ಅವರ ಪುತ್ರ 48 ವರ್ಷ ಪ್ರಾಯದ ಶ್ರೀ ಪಿ. ಸುನೀಲ್ ಕುಮಾರ್ ಪಡುಬಿದ್ರಿ, ಅವರು ತಾ. 31.07.2022ರಂದು ನಿಧನರಾದರು. ಮೃತರು ತಂದೆ, ತಾಯಿ, ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿದ್ದಾರೆ.

**** ****




ಶ್ರೀ ಬೋಳ ವೆಂಕಟ್ ರಾವ್ ಅವರು ತಮ್ಮ 80ನೇ ವಯಸ್ಸಿನಲ್ಲಿ ತಾ. 02–08–2022 ರಂದು ತಮ್ಮ ನಿವಾಸ, ಗುಂಡುರಾವ್ ಲೇನ್, ಮಣ್ಣಗುಡ್ಡೆ, ಮಂಗಳೂರಿನಲ್ಲಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿಯನ್ನು ಅಗಲಿದ್ದಾರೆ.

**** ****

ರತ್ನಗಿರಿ (ಮಹಾರಾಷ್ಟ್ರ)ಯಲ್ಲಿ ವಾಸವಾಗಿರುವ ಶ್ರೀಮತಿ ಸುಲೋಚನಾ ಶೇಷಪ್ಪಯ್ಯ ಶಾನುಭಾಗ ತಮ್ಮ 86ನೇ ವಯಸ್ಸಿನಲ್ಲಿ ತಾ.31.07.2022 ರಂದು ನಿಧನರಾದರು. ಮೃತರು ಮೂವರು ಪುತ್ರರನ್ನು ಅಗಲಿದ್ದಾರೆ.


**ದೇವಿಕೃಪಾ ಏಜೆನ್ಸೀಸ್, ನಂದಿಕೂರು**



ಫೋನ್ : 2556536 (R), 2555466 (O), Mobile : 9845149521

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

ಪ್ರೊ.: ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು






**RAJESH POWER PRESS**

**PRINTERS & PUBLISHERS**

DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

**QUALITY FIRST AND ALWAYS**


### ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 4-00ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ
ಪ್ರತಿ ಮಂಗಳವಾರ: ಸೌಂದರ್ಯಲಹರಿ ಪಾರಾಯಣ ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ
ಪ್ರತಿ ಶುಕ್ರವಾರ : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5ರಿಂದ
ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "ಪಾರಾಯಣ" ಸಂಜೆ ಗಂಟೆ 4-30ರಿಂದ

**ತಾ.13-09-2022 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.100/-)**

ತಾ.05-09-2022 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)

ತಾ.01-09-2022 ಮತ್ತು ತಾ.15-09-2022 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

### ಸಿಂಹ ಮಾಸದ ವಿಶೇಷ ದಿನಗಳು

| | | | |
|---|---|---|---|
| 17.08.2022 | ಸಿಂಹ ಸಂಕ್ರಮಣ | 06.09.2022 | ಸಾರ್ತೈಕಾದಶಿ |
| 18.08.2022 | ಶ್ರೀ ಕೃಷ್ಣ ಜನ್ಮಾಷ್ಟಮಿ | 07.09.2022 | ಭಾಗವತ–ವೈಷ್ಣವೈಕಾದಶಿ |
| 19.08.2022 | ಶ್ರೀ ಕೃಷ್ಣ ಲೀಲೋತ್ಸವ–ವಿಟ್ಲಪಿಂಡಿ | 08.09.2022 | ಋಗುಪಾಕರ್ಮ |
| 22.08.2022 | ಸರ್ವೈಕಾದಶಿ | 09.09.2022 | ಅನಂತ ಚತುರ್ದಶಿ |
| 27.08.2022 | ಅಮಾವಾಸ್ಯೆ | 10.09.2022 | ಹುಣ್ಣಿಮೆ, ಮಹಾಲಯ ಆರಂಭ |
| 28.08.2022 | ವರ್ಷ ಋತು ಭಾದ್ರ ಮಾಸದ ಶುಕ್ಲ ಪಕ್ಷಾರಂಭ | 11.09.2022 | ವರ್ಷ ಋತು ಭಾದ್ರಪದ ಮಾಸದ ಕೃಷ್ಣ ಪಕ್ಷಾರಂಭ |
| 30.08.2022 | ಗೌರೀ ತೃತೀಯಾ, ಸಾಮೋಪಾಕರ್ಮ | 13.09.2022 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 8.50 |
| 31.08.2022 | ಗಣೇಶ ಚತುರ್ಥಿ | 17.09.2022 | ಕನ್ಯಾ ಸಂಕ್ರಮಣ |
| 01.09.2022 | ಋಷಿ ಪಂಚಮಿ | | |

### ತೆರೆದ ಮನ

ತೆರೆದ ಮನದಿ
ಕೆಲವನ್ನು ಅರಗಿಸಿ
ಕೆಲವನ್ನು ಕರಗಿಸಿ
ಎಲ್ಲವೂ ಸ್ವೀಕೃತ
ಹಾಗೆಂದು ಎಲ್ಲವೂ
ಸಮ್ಮತವೆಂದೇನಲ್ಲ

### ವ್ಯಕ್ತಿತ್ವ

ಇತರರು
ಚಪ್ಪಲಿ ತೆಗೆದು
ಗೌರವ
ನೀಡುವಂತಿರಬೇಕು
ಆದರೆ
ಅದೇ ಚಪ್ಪಲಿ
ಕೈಗೆ ಬರುವಂತೆ
ಇರಬಾರದು!!

### ಧೈರ್ಯ

ಲಾಭನಷ್ಟಗಳ
ಲೆಕ್ಕಾಚಾರದಲ್ಲಿ
ಸತ್ಯ ಸಾಯದಿರಲಿ !
ತಪ್ಪನ್ನು ತಪ್ಪೇ
ಎಂದು ಹೇಳುವ
ಧೈರ್ಯವಿರಲಿ !!

### ಗೊಂದಲ

ಅನುಭವವೆಂದರೆ
ಪ್ರಾಯವಾಗುವುದೋ?
ಪಕ್ವವಾಗುವುದೋ?

### ಭೂಷಣ

ಯಾವುದಕ್ಕಾದರೂ
ಅರ್ಥವಿದ್ದರೆ ಚಂದ
ಅದು ಮಾತಿಗಾದರೂ ಸರಿ
ಮೌನಕ್ಕಾದರೂ ಸರಿ

–ಮಹೇಶ್ ನಿಟಿಲಾಪುರ

### ವಿಳಾಸ ಬದಲಾವಣೆ

**ವೈ. ಮನೋಹರ್ ರಾವ್**
C/o ಕೆ.ಜಿ.ಭಟ್ ಕಾಂಪೌಂಡ್,
ಕುಂಜಾರುಗಿರಿ ದೇವಸ್ಥಾನ ರಸ್ತೆ,
ಸುಭಾಸ್‌ನಗರ–574115, ಉಡುಪಿ
ತಾಲೂಕು ಮತ್ತು ಜಿಲ್ಲೆ.

### ಅಕ್ಷರಗಳನ್ನು ಸರಿಯಾಗಿ ಜೋಡಿಸಿ ಸರಿಯಾದ ಗೀತೆ ರಚಿಸಿ

1) ಯ।ಮ।ನಂ।ಗ।ಜ।ಈ।ಯ।ದ।ಹೃ।ಆದ
2) ನೆರ।ವೆ।ನೀ।ಲ್ಲಿ।ದೂ।ಡ।ನೆ
3) ಯಾ।ದ।ನ।ಳ।ರೊಂ।ವಿ।ನೂ।ದಿಂ।ನೆ।ದು।ಪು।ದೆ
4) ನ।ಮೋ।ತೇ।ಬಾ।ಡ।ಆ।ಲಾ।ತಾ।ಡು।ಲ್ಲಿ
5) ಬಾ।ನೀ।ಳ।ಸ।ತೆ।ಹೊ।ದೆ।ಜೋ।ಗೆ।ಯಾ
6) ದ।ಶ।ಳ।ದಿಂ।ಕಾ।ರೆ।ದ।ರಂ।ಆ।ಧ।ಭೆ।ಗಿ
7) ಯ।ನಾ।ಮ್ಯಾ।ಬ।ಗ।ಬಿ।ಳ।ನಿಂ।ದ
8) ಹೊ।ನ।ಲಿ।ನ।ಳ।ಯೊ।ಮ।ನಿ।ಯೊ।ಳ।ಜೇ।ಹಾ
9) ನ್ನ।ಲಿ।ಣ।ಲ್ಲೆ।ಕಾ।ನೋ।ವೆ।ನ್ನೆ।ಲ್ಲಿ।ವಿ।ನಿ।ಡ
10) ರು।ಳೆ।ನ।ಗಾ।ಳೆ।ಗ।ಹ।ಬ।ಜಿ।ಸಿ

ವಾಟ್ಸ್ ಆ್ಯಪ್ ಮೂಲಕ ಉತ್ತರವನ್ನು ನೀಡಿ. ವಾಟ್ಸಾಪ್ ನಂ.9663028751 ಮೊದಲ ಹತ್ತು ಜನರ ಹೆಸರನ್ನು ಮುಂದಿನ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.



ತಯಾರಿಸಿದವರು :
ಹರೀಶ್ ಹೆಬ್ಬಾರ್ ಹವರಾಲು
9663028751


ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯೆಶಸ್ವೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

## ಪ್ರತಿಭಾನ್ವಿತರು



ಕಾಪುವಿನ ಗಿರೀಶ್‌ಚಂದ್ರ ರಾವ್ ಮತ್ತು ಅಕ್ಷತಾ ರಾವ್ ದಂಪತಿಗಳ ಪುತ್ರ ಕೆ. ಅರುಣ್ ಕುಮಾರ್ ರಾವ್ ಪ್ರಸ್ತುತ ಸಾಲಿನ ಎಸ್.ಎಸ್.ಎಲ್.ಸಿ. ಪಬ್ಲಿಕ್ ಪರೀಕ್ಷೆಯಲ್ಲಿ 616/625 ಅಂಕಗಳಿಸಿ ಉತ್ತೀರ್ಣರಾಗಿದ್ದಾರೆ. ಇವರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು



ಮೈಸೂರಿನಲ್ಲಿರುವ ಶ್ರೀಮತಿ ಆಶಾ ಮತ್ತು ಎಂ. ಅಶೋಕ ರಾವ್ ಚಿಟ್ಪಾಡಿ ಇವರ ಪುತ್ರ ಆದರ್ಶ್ ಮೈಸೂರಿನ ಕೌಟಿಲ್ಯ ವಿದ್ಯಾಲಯದಲ್ಲಿ ಈ ಬಾರಿಯ ಎಸ್.ಎಸ್.ಎಲ್.ಸಿಯು ಸಿ.ಬಿ.ಎಸ್.ಇ.ನಲ್ಲಿ 98.4% ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ. ಇವರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು



ಬೆಳ್ಮಣ್ ಡಾ. ಬಾಲಕೃಷ್ಣರಾವ್ ಮತ್ತು ಸುನೀತಾ ದಂಪತಿಗಳ ಪುತ್ರ ಸುಧಾಂಶು ಎಸ್.ಎಸ್.ಎಲ್.ಸಿ ಯ ಸಿ.ಬಿ.ಎಸ್.ಸಿ. ಪರೀಕ್ಷೆಯಲ್ಲಿ 94% ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಇವರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

## ಶ್ರೀಮತಿ ಶ್ರೀಲತಾ ಪ್ರಕಾಶ್ ಇವರಿಗೆ ಬೀಳ್ಕೊಡುಗೆ



ಉಡುಪಿಯ ಶ್ರೀ ಬಿ. ಪ್ರಕಾಶ್ ರಾವ್ ಇವರ ಪತ್ನಿ ಶ್ರೀಮತಿ ಶ್ರೀಲತಾ ಪ್ರಕಾಶ್‌ರವರು ಉಡುಪಿಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಸುಮಾರು 34 ವರ್ಷ ಸೇವೆ ಸಲ್ಲಿಸಿ 29.07.2022ರಂದು ನಿವೃತ್ತಿ ಹೊಂದಿರುತ್ತಾರೆ. ಆರೋಗ್ಯ ಇಲಾಖೆಯ ಮುಖ್ಯ ಸಿಬ್ಬಂದಿ ವರ್ಗವು ಶ್ರೀಲತಾರವರಿಗೆ ಪ್ರೀತಿಪೂರ್ವಕವಾಗಿ ಬೀಳ್ಕೊಡುವ ಸಮಾರಂಭ ಏರ್ಪಡಿಸಿದ್ದರು.



## ಕರ್ನಾಟಕ ಕರಾವಳಿ ನೃತ್ಯ ಕಲಾ ಪರಿಷತ್ (ರಿ) ಮಂಗಳೂರು ಇದರ ನೂತನ ಅಧ್ಯಕ್ಷರಾಗಿ ವಿದ್ವಾನ್ ಯು.ಕೆ. ಪ್ರವೀಣ್

ಕದ್ರಿ ನೃತ್ಯ ಕೇಂದ್ರದಲ್ಲಿ ಜರುಗಿದ ಕರ್ನಾಟಕ ಕರಾವಳಿ ನೃತ್ಯ ಕಲಾ ಪರಿಷತ್ (ರಿ) ಮಂಗಳೂರು ಇದರ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ವಿದ್ವಾನ್ ಯು.ಕೆ. ಪ್ರವೀಣ್ ಅವರು ನೂತನ ಅಧ್ಯಕ್ಷರಾಗಿ ಮುಂದಿನ ಮೂರು ವರ್ಷಗಳ ಅವಧಿಗೆ ಆಯ್ಕೆಗೊಂಡಿರುತ್ತಾರೆ.



ರೋಟರಿ ಜಿಲ್ಲೆ 3182 ವಲಯ 4 ವಲಯ ಸೇನಾನಿಯಾಗಿ ಕಾರ್ಯನಿರ್ವಹಿಸಿದ ರೋಟೇರಿಯನ್ ಉಮೇಶ್ ರಾವ್ ಅವರಿಗೆ ರೋಟರಿ ರಾಯಲ್ ಹಾಗೂ ರೋಟರಿ ಉದ್ಯಾವರದಿಂದ ಅಭಿನಂದನಾ ಕಾರ್ಯಕ್ರಮ.



## ಭಜನಾ ಸಂಚಾಲಕರಾಗಿ ಶ್ರೀಯುತ ತಂತ್ರಾಡಿ ಗಿರೀಶ್ ರಾವ್ ಆಯ್ಕೆ

ಶ್ರೀ ಶಾಂಕರ ತತ್ವ ಪ್ರಸಾರ ಅಭಿಯಾನದ ಜಿಲ್ಲಾ ಭಜನಾ ಸಂಚಾಲಕರಾಗಿ ಶ್ರೀಯುತ ತಂತ್ರಾಡಿ ಗಿರೀಶ್ ರಾವ್ ಇವರನ್ನು ಶಾಂಕರ ತತ್ವ ಪ್ರಸಾರ ಅಭಿಯಾನದ ಉಡುಪಿ ಜಿಲ್ಲಾ ಸಂಚಾಲಕರು ನೇಮಿಸಿರುತ್ತಾರೆ.ಇವರಿಗೆ ಶ್ರೀಶಾರದಾ ಬಳಗದಿಂದ ಅಭಿನಂದನೆಗಳು.

## ಗುರುದೇವತಾ ಭಜನಾ ಅಭಿಯಾನ



ಶಂಕರತತ್ವ ಅಭಿಯಾನ, ಶ್ರೀ ಸುಬ್ರಹ್ಮಣ್ಯ ಸಭಾ ಮತ್ತು ಅನೇಕ ಭಜನಾ ತಂಡಗಳ ಸಹಕಾರದಿಂದ ಮತ್ತು ಜಗದ್ಗುರುಗಳ ಆದೇಶ ಮತ್ತು ಆಶೀರ್ವಾದದಿಂದ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ದಿನ ಪೂರ್ತಿ ಭಜನಾ ಕಾರ್ಯಕ್ರಮ ನಡೆಯಿತು. ಬೆಳಿಗ್ಗೆ 7.30 ಕ್ಕೆ ಗುರುಸಪರ್ಯಾ, ವಿವಿಧ ಪಾರಾಯಣ, ಉಪನ್ಯಾಸ ಬಳಿಕ ಕಾರ್ಯಕ್ರಮ 9 ಗಂಟೆಗೆ ಉದ್ಘಾಟನೆ ಶಂಕರತತ್ವ ಅಭಿಯಾನದ ರಾಜ್ಯ ಸಂಚಾಲಕರಾದ ಶ್ರೀ ಶಿಕಾರಿಪುರ ಕೃಷ್ಣಮೂರ್ತಿ, ವಿದ್ವಾಂಸರಾದ ಶ್ರೀ ದಿವಾನ ಕೇಶವ ಭಟ್, ಶ್ರೀ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷರಾದ ಶ್ರೀ ಹರ್ಷ ಕುಮಾರ್ ಕೇದಿಗೆ ದೀಪ ಪ್ರಜ್ವಲನೆ ನಡೆಸುವ ಮೂಲಕ ನಡೆಸಿದರು. ಸುಮಾರು 10 ಕ್ಕೂ ಅಧಿಕ ತಂಡಗಳು ಗುರುದೇವತಾ ಭಜನಾ ಮಂಜರಿಯ ಭಜನೆಗಳನ್ನು ಅದೇ ರಾಗದಲ್ಲಿ ಸರತಿಯಂತೆ ಏಳು ಗಂಟೆಗಳ ಕಾಲ ನಿರಂತರವಾಗಿ ಹಾಡಿ ಗುರುಗಳನ್ನು, ದೇವರನ್ನು ಭಕ್ತಿಯಿಂದ ಸ್ತುತಿಸಿದರು. ಸುಮಾರು 250ಕ್ಕೂ ಹೆಚ್ಚು ಶಂಕರ ಭಕ್ತರು ಪಾಲ್ಗೊಂಡಿದ್ದರು. ಅಭಿಯಾನದ ಸಂಚಾಲಕರುಗಳಾದ ಶ್ರೀ ಶ್ರೀಧರ್ ಶಾಸ್ತ್ರೀ, ಶ್ರೀ ಕರುಣಾ ರಾವ್ ಬೆಳ್ಳೆ, ಶ್ರೀಮತಿ ಸುಜಾತ ಕಾರಂತ್, ಶ್ರೀ ಸುಬ್ರಹ್ಮಣ್ಯ ಸಭಾದ ಮಹಿಳಾ ವೇದಿಕೆಯ ಪದಾಧಿಕಾರಿಗಳಾದ ಶ್ರೀಮತಿ ಕುಸುಮಾ ಎನ್, ಶ್ರೀಮತಿ ಪುಷ್ಪಾವತಿ ಎಸ್, ಶ್ರೀಮತಿ ಸ್ನೇಹಲತಾ ಡಿ, ಶ್ರೀಮತಿ ಭುವನಾ ಎನ್. ವ್ಯವಸ್ಥೆಗಳಲ್ಲಿ ಸಹಕರಿಸಿದರು. ಅಭಿಯಾನದ ನಗರ ಸಂಚಾಲಕರಾದ ಶ್ರೀ ಪಿ.ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರು. ಸಹಕರಿಸಿದ ಸರ್ವರಿಗೂ ವಂದನೆಗಳು.

## ಮಾಜಿ ಯೋಧ ಸುರೇಶ್ ಕುತ್ಪಾಡಿಯವರಿಗೆ ಸನ್ಮಾನ



ನಮ್ಮ ಸಂಘದ ನಿರ್ದೇಶಕರಾದ ಮಾಜಿ ಯೋಧ ಶ್ರೀ ಸುರೇಶ್ ಕುತ್ಪಾಡಿಯವರನ್ನು ತಾ.27.07.2022ರಂದು ಟಿ.ಎ.ಪೈ.ಮೋಡರ್ನ್ ಹಿರಿಯ ಪ್ರಾಥಮಿಕ ಶಾಲೆ, ಕಾಡಬೆಟ್ಟು, ಬ್ರಹ್ಮಗಿರಿ ಇಲ್ಲಿ ಲಯನ್ಸ್ ಕ್ಲಬ್ ಬ್ರಹ್ಮಗಿರಿ ವತಿಯಿಂದ "ಕಾರ್ಗಿಲ್ ವಿಜಯ್ ದಿವಸ್" ಪ್ರಯುಕ್ತ ಸನ್ಮಾನಿಸಲಾಯಿತು.



ಶ್ರೀ ಗಣೇಶೋತ್ಸವ ಸಮಿತಿ ದೊಡ್ಡನಗುಡ್ಡೆ ಆಶ್ರಯದಲ್ಲಿ ಜರುಗಿದ ಭಜನಾ ಸ್ಪರ್ಧೆಯಲ್ಲಿ ಶ್ರೀ ಶಾರದಾ ಭಜನಾ ಮಂಡಳಿ ಪ್ರಥಮ ಸ್ಥಾನವನ್ನು ಪಡೆದಿರುತ್ತಾರೆ. ಇವರ ಭಜನಾ ತಂಡಕ್ಕೆ ಶ್ರೀ ಶಾರದಾ ಅಭಿನಂದನೆಗಳು.

PRODUCTS ARE AVAILABLE AT ATTRACTIVE DISCOUNT PRICES




BATTERY PLANET
SALES & SERVICES
Dealers : Inverter, Batteries, Gas Geysers & Solar Water Heaters
Udupi, Padubidri, Contact : 94824 57926, 99455 43051
* Inverter+battery rates starts from Rs. 11,990

## "ಶಿವಸದನ" ಹಿರಿಯ ನಾಗರಿಕರ ವಸತಿನಿಲಯಕ್ಕೆ ದೇಣಿಗೆ



ಉಡುಪಿ ಪ್ರಖ್ಯಾತ ದಕ್ಷಿಣಾದಿ ಸಂಗೀತ ವಿದ್ವಾಂಸರಾದ ಶ್ರೀ ಬಿ.ಭುಜಂಗ ರಾವ್ ಹಾಗೂ ಶ್ರೀಮತಿ ಶಾಂತಮ್ಮ ಇವರ ಸ್ಮರಣಾರ್ಥ ಅವರ ಮಗಳು ಶ್ರೀಮತಿ ರಾಜೇಶ್ವರಿ ಶುಭಾಕರ್ ಶಾನುಭೋಗ್, ಕಾಸರಗೋಡು ಮತ್ತು ಅವರ ಮಗ ಶ್ರೀ ಬಿ.ಜಯರಾಮ್ ರಾವ್, ಮೊಕ್ತೇಸರರು ಪಾದೆಬೆಟ್ಟು ವಿಷ್ಣುಮೂರ್ತಿ ದೇವಸ್ಥಾನ ಇವರು ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ "ಶಿವಸದನ" ಹಿರಿಯ ನಾಗರಿಕರ ವಸತಿನಿಲಯಕ್ಕೆ ರೂ.1,00,000ಗಳನ್ನು ಶ್ರೀ ಸುಬ್ರಹ್ಮಣ್ಯ ಸಭಾದ "ಆಟಿತೋ ಆಟ ಕೂಟ" ಕಾರ್ಯಕ್ರಮದ ಸಂದರ್ಭದಲ್ಲಿ ದೇಣಿಗೆ ನೀಡಿದರು. ಈ ಸಂದರ್ಭದಲ್ಲಿ ಶ್ರೀ ಶುಭಾಕರ್ ಶಾನುಭೋಗ್, ಶ್ರೀಮತಿ ವೀಣಾ ಜಯರಾಮ್ ರಾವ್, ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷ್ ಕುಮಾರ್ ಕೇದಿಗೆ, ಉಪಾಧ್ಯಕ್ಷರುಗಳಾದ ಡಾ.ಎ.ಪಿ. ಕೃಷ್ಣ, ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ಜತೆ ಕಾರ್ಯದರ್ಶಿಗಳಾದ ಶ್ರೀ ಅನಿಲ್ ರಾವ್ ಬಿ.ಎಸ್, ಶ್ರೀ ಚೇತನ್ ಶರ್ಮಾ, ನಿರ್ದೇಶಕರುಗಳಾದ ಶ್ರೀ ಇನ್ನ ಚಂದ್ರಶೇಖರ್ ರಾವ್, ಶ್ರೀ ಪಿ.ಮುರಳೀಧರ ರಾವ್, ಶ್ರೀ ಎಂ.ಸುರೇಶ್ ರಾವ್ ಹಾಗೂ ಶ್ರೀ ಐ. ಪಿ. ನಾಗರಾಜ್ ರಾವ್ ಉಪಸ್ಥಿತರಿದ್ದರು.



ಶ್ರೀ ಶೃಂಗೇರಿ ಮಠದ ಧರ್ಮಾಧಿಕಾರಿ ಶ್ರೀ ಸತ್ಯಶಂಕರ ಬೊಳ್ಳಾವ ಇವರಿಗೆ ತಾ.25.06.2022ರಂದು ಶ್ರೀ ಶೃಂಗೇರಿ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು "ಶ್ರೀ ಭಾರತಿ ತೀರ್ಥ ಪ್ರಶಸ್ತಿ" ನೀಡಿ ಸನ್ಮಾನಿಸಿದರು.

## ಬಾರಕೂರಿನಲ್ಲಿ ಆಯುರ್ವೇದ ವೈದ್ಯಕೀಯ ತಪಾಸಣಾ ಶಿಬಿರ




“ಶ್ರೀ ಜ್ಞಾನಶಕ್ತಿ ಸ್ಥಾನಿಕ ಬ್ರಾಹ್ಮಣ ಸಭಾ (ರಿ) ಬ್ರಹ್ಮಾವರ ತಾಲೂಕು ಇದರ ವತಿಯಿಂದ ಆಯುರ್ವೇದ ವೈದ್ಯಕೀಯ ತಪಾಸಣಾ ಶಿಬಿರವನ್ನು ದಿನಾಂಕ 31/07/2022 ರಂದು ಬಾರಕೂರಿನ ರಥಬೀದಿಯ ಶಾರದಾ ಸಂಕೀರ್ಣದಲ್ಲಿ ನೆರವೇರಿತು. ಖ್ಯಾತ ಆಯುರ್ವೇದ ತಜ್ಞೆ ಡಾಕ್ಟರ್ ಮಾಲತಿ ಇವರು ಆಯುರ್ವೇದ ವೈದ್ಯಕೀಯ ತಪಾಸಣೆ ನಡೆಸಿದರು. ಸುಮಾರು ನಲವತ್ತು ಜನ ಈ ಶಿಬಿರದ ಪ್ರಯೋಜನ ಪಡೆದಿದ್ದು, ಜನಸಾಮಾನ್ಯರಲ್ಲಿ ಆರೋಗ್ಯದ ಬಗ್ಗೆ ಕಾಳಜಿ ಮೂಡಿಸಿದ್ದು ಮಾತ್ರವಲ್ಲದೆ ತಮ್ಮ ದಿನನಿತ್ಯದ ದಿನಚರಿಯನ್ನು ಆರೋಗ್ಯಕರ ರೀತಿಯಲ್ಲಿ ಬದಲಾವಣೆ ಮಾಡಿಕೊಳ್ಳುವಂತೆ ಪ್ರೇರೇಪಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ರಾವ್ ವಹಿಸಿದ್ದು, ಉಮೇಶ್ ಆಚಾರ್ಯ, ಸತೀಶ್ ಅಮೀನ್, ಶಂಭು ಶಂಕರರಾವ್, ಉದಯ ಬಾರ್ಕೂರು ಮಂತಾದವರು ಉಪಸ್ಥಿತರಿದ್ದರು. ಶರಣ್ಯ ಪ್ರಾರ್ಥಿಸಿದರು. ಶ್ರೀ ಜ್ಞಾನಶಕ್ತಿ ಸ್ಥಾನಿಕ ಬ್ರಾಹ್ಮಣ ಸಭಾದ ಕಾರ್ಯದರ್ಶಿಯಾದ ಶ್ರೀಮತಿ ಸವಿತಾ ಎರ್ಮಾಳ್ ಸ್ವಾಗತಿಸಿದರು. ಪಿ. ಜಯರಾಮ ರಾವ್ ಇವರು ಪ್ರಸ್ತಾವಿಕವಾಗಿ ಮಾತನಾಡಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.



ಡಾ। ವೈ. ಸುದರ್ಶನ್ ರಾವ್ ನೇತೃತ್ವದಲ್ಲಿ ಉಡುಪಿ ಜಿಲ್ಲೆಯ ವಿವಿಧ ರೀತಿಯ ಎಲ್ಲಾ ತಜ್ಞ ವೈದ್ಯರ ಸಂಘದ ಒಕ್ಕೂಟವನ್ನು ತಾ.06.08.2022ರಂದು ರಚಿಸಲಾಯಿತು. ಆ ಸಂದರ್ಭದಲ್ಲಿ ಮಂಗಳೂರಿನ ಎಂ.ಐ.ಒ. ವತಿಯಿಂದ "ಕ್ಯಾನ್ಸರ್ ಕಾಯಿಲೆಯ ಸಮಗ್ರ ನಿರ್ವಹಣೆ" ಕುರಿತು ಕಾರ್ಯಾಗಾರವನ್ನು ನಡೆಸಲಾಯಿತು.


ತಂತ್ರಾಡಿ ವಿಶ್ವನಾಥ ಶಾನುಭೋಗ್
94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
“ಶ್ರೀರಂಗ ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು ಉಡುಪಿ - 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

GST : 29AKMPN4985H1ZD
ಶ್ರೀ ಕೃಷ್ಣ ಎಲೆಕ್ಟ್ರಾನಿಕ್ಸ್ & ಎಲೆಕ್ಟ್ರಿಕಲ್ಸ್
Mob. 9448953022
SHREE KRISHNA
ELECCTRONICS & ELECTRICALS
Sri Balaji Complex, Shop No-G-7, Near KSRTC Bus Stand, Udupi - 576101.
City Towers, Service Bus Stand, Near Rao and Rao Circle, State Bank, Mangalore - 575001
Branch at Mahalaxmi Prabha Complex, Market Road, Opp Tajmahal Hotel, Karkala

With Best Compliments From :
BUILDING DREAMS, ENHANCING LIVES.

Land Trades
BUILDERS & DEVELOPERS
BUILDING TRUST, DELIVERING VALUE
NAKSHATRA
GANDHINAGAR
SOLITAIRE
HATHILL,
HABITAT ONE 54
DEREBAIL
ANANTESSH
CAR STREET,
MANGALURU'S LEADING REAL ESTATE COMPANY
RESIDENTIAL | COMMERCIAL | PLOTS
For More Details : 8882 777 444 | 0824 2425424, 2423866 | www.landtrades.in
Follow us on :

Owned, Published & Edited by : Sri Y. Muralikrishna Rao onbehalf of Sri Sthanika Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 2958444
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org